# 3. ಚೆಲುವು ತುಂಬಲಿ

**ಪೀಠಿಕೆ**

ನಮ್ಮ ಬುವಿಯು ಸೌಂದರ್ಯದ, ವಿಸ್ಮಯಗಳ ಗಣಿಯಾಗಿದೆ. ಕಾಲಾಂತರದಲ್ಲಿ ಉಂಟಾದ ಬದಲಾವಣೆಗಳಿಂದ ಇಂದು ಕಾಣುವ ಗುಡ್ಡ, ಬೆಟ್ಟ, ಕಾಡು, ಕಣಿವೆ, ನದಿ, ಶರಧಿಗಳು ರೂಪುಗೊಂಡಿವೆ. ಇವುಗಳು ಜೀವಜಾಲಗಳ ಹುಟ್ಟಿಗೂ ಬೆಳವಣಿಗೆಗೂ ಕಾರಣೀಭೂತವಾಗಿವೆ. ಇವುಗಳ ರಕ್ಷಾಕವಚವಾಗಿ ವಾಯು ಮಂಡಲವು ಭೂಮಿಯನ್ನು ಆವರಿಸಿದೆ. ಇವುಗಳಲ್ಲಿ ಯಾವುದಾದರೊಂದರಲ್ಲಿ ಕಿಂಚಿತ್ತು ಬದಲಾವಣೆಯಾದರೂ ಜೀವಜಾಲಗಳಿಗೆ ಅಪಾಯ ತಪ್ಪಿದ್ದಲ್ಲ. ಆದರೆ ಈ ಸುಂದರ ಪೃಥ್ವಿಯನ್ನು ಮಾನವನೊಬ್ಬನೇ ತನ್ನ ಸ್ವಾರ್ಥಕ್ಕಾಗಿ ಬಳಸುತ್ತಿದ್ದಾನೆ. ಪ್ರಕೃತಿಗೆ ವಿರುದ್ಧವಾಗಿ ಮಾನವನು ನಡೆಸುವ ಚಟುವಟಿಕೆಗಳಾದ ಅರಣ್ಯ ನಾಶ, ನಗರೀಕರಣ, ಕೈಗಾರಿಕೀಕರಣಗಳಿಂದಾಗಿ ಭೂಮಿಯಲ್ಲಿ ಬದಲಾವಣೆಗಳಾಗತೊಡಗಿವೆ. ಭೂಮಂಡಲದಲ್ಲಿ ಬಿಸಿ ಏರುವಿಕೆ, ಕೆಲವು ಜೀವ ಸಂಕುಲಗಳ ನಾಶ, ಹೊಸ ರೋಗಗಳ ಉತ್ಪತ್ತಿ ಇತ್ಯಾದಿ ಸಂಕಷ್ಟಗಳನ್ನು ನಾವು ಮುಂದಿನ ಪೀಳಿಗೆಗೆ ನೀಡುತ್ತಿದ್ದೇವೆ. ಮಾನವನ ಆಕಾಂಕ್ಷೆಗಳಿಗೆ ಮಿತಿ ಇಲ್ಲದಾದಾಗ ಹೊಸ ಸಂಶೋಧನೆಗಳು ನಡೆದಂತೆ ಪರಿಸರವು ಮಲಿನವಾಗುವುದರೊಂದಿಗೆ ಸಿಹಿ ನೀರಿನ ಮೂಲಗಳು ಬತ್ತುತ್ತಿವೆ. ಓರ್ಝೋನ್ ಪದರವು ಛಿದ್ರವಾಗುತ್ತಿದೆ. ಆದುದರಿಂದ ನಾವು ಇಂದು ಧರಣಿಯಲ್ಲಿರುವ ಸಂಪನ್ಮೂಲಗಳನ್ನು ಪ್ರಕೃತಿಗೆ ಹಾನಿಯಾಗದಂತೆ ಬಳಸಬೇಕಾಗಿದೆ. ಮಕ್ಕಳಲ್ಲಿ ಇದರ ಕುರಿತು ಜಾಗೃತಿ ಮೂಡಿಸಲೂ ಪ್ರಕೃತಿಯನ್ನು ಪ್ರೀತಿಸುವ ಮನೋಭಾವವನ್ನು ಬೆಳೆಸಲೂ ಈ ಘಟಕವನ್ನು ಆಯ್ದು ಕೊಳ್ಳಲಾಗಿದೆ.

**ಕಲಿಕಾ ಸಾಧನೆಗಳು**

- ಕಥೆ, ಕವಿತೆಗಳನ್ನು ಸೂಕ್ತವಾದ ಭಾವಾಭಿವ್ಯಕ್ತಿಯೊಂದಿಗೆ ಮಂಡಿಸುವುದು.
- ಕಥೆ, ಕವಿತೆ, ನಾಟಕ ಮೊದಲಾದ ಸೃಜನಾತ್ಮಕ ರಚನೆಗಳ ರಚನಾ ರೀತಿ, ಔಚಿತ್ಯ, ವೈವಿಧ್ಯ ಮೊದಲಾದವುಗಳನ್ನು ಪರಿಗಣಿಸಿಕೊಂಡು ಸ್ವಂತ ದೃಷ್ಟಿಕೋನಕ್ಕನುಸಾರವಾಗಿ ಆಸ್ವಾದಿಸಿ, ವಾಚಿಕವಾಗಿ ಮಂಡಿಸುವುದು ಮತ್ತು ಬರೆದು ಮಂಡಿಸುವುದು.
- ವಿವಿಧ ಆಶಯ ಮಂಡಲಗಳಿಗೆ ಸಂಬಂಧಿಸಿದ ಚರ್ಚೆ, ಸಂವಾದಗಳಲ್ಲಿ ಭಾಗವಹಿಸಿ ಆಶಯಗಳನ್ನು, ಅಭಿಪ್ರಾಯಗಳನ್ನು ತರ್ಕ ಬದ್ಧವಾಗಿ ಮಂಡಿಸುವುದು.
- ಚರ್ಚೆ, ಸಂವಾದಗಳಿಂದ ರೂಪುಗೊಂಡ ಆಶಯಗಳನ್ನು ಕ್ರೋಢೀಕರಿಸಿ ವಾಚಿಕವಾಗಿಯೂ ಲಿಖಿತರೂಪದಲ್ಲಿಯೂ ಪ್ರಕಟಿಸುವುದು.
- ಸ್ವಂತ ಅಭಿಪ್ರಾಯಗಳನ್ನು ಶಿಷ್ಟ ರೂಪದಲ್ಲಿ ಮಂಡಿಸುವುದು.
- ಮೌಲ್ಯ ನಿರ್ಣಯ ಸೂಚಕಗಳನ್ನು ಸ್ವಯಂ ಕಂಡುಕೊಂಡು, ತನ್ನ ಮತ್ತು ಇತರರ ರಚನೆಗಳನ್ನು ಮೌಲ್ಯ ನಿರ್ಣಯ ಮಾಡುವುದು.
- ಸಾಮಾಜಿಕ ಮಹತ್ವವುಳ್ಳ ವಿಷಯಗಳನ್ನು ಆಧಾರವಾಗಿರಿಸಿ ಪ್ರಬಂಧ, ಮನವಿ, ಭಾಷಣ ಇತ್ಯಾದಿಗಳನ್ನು ರಚಿಸುವುದು.
- ಕೇರಳದ ಕಲಾ ಪ್ರಕಾರಗಳನ್ನು ಆಸ್ವಾದಿಸುವುದು ಮತ್ತು ಅವುಗಳ ಬಗ್ಗೆ ತಿಳಿದುಕೊಳ್ಳುವ ಚಟುವಟಿಕೆಗಳಲ್ಲಿ ತೊಡಗುವುದು.

**ಘಟಕ 3 ಚೆಲುವು ತುಂಬಲಿ** **ಯೂನಿಟ್ ಗ್ರಿಡ್** **ಸಮಯ : 20 ಪಿರೇಡುಗಳು**

| ಪಾಠದ ಹೆಸರು | ಆಶಯ / ಉದ್ದೇಶ | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
|---|---|---|---|---|
| ಮುಂಜಾನೆಯ ಮೋಡಿ | • ನಮ್ಮ ಪ್ರಕೃತಿಯು ಬಹಳ ಸುಂದರವಾಗಿದೆ.<br>• ಪ್ರಕೃತಿಯ ಸೌಂದರ್ಯವನ್ನು ಹೊಗಳುವ ಸಾಕಷ್ಟು ಸಾಹಿತ್ಯಗಳು ಕನ್ನಡ ಭಾಷೆಯಲ್ಲಿದೆ.<br>• ಹಲವಾರು ಕನ್ನಡ ಕವಿಗಳು ಪ್ರಕೃತಿಯನ್ನು ವರ್ಣಿಸಿ ಕವಿತೆಗಳನ್ನು ರಚಿಸಿದ್ದಾರೆ ಎಂದು ತಿಳಿಯುವುದು.<br>• ಪ್ರಕೃತಿಯನ್ನು ಪ್ರೀತಿಸುವ ಮನೋಭಾವವನ್ನು ಬೆಳೆಸುವುದು. | • ರಾಗವಾಗಿ ಹಾಡುವುದು<br>• ಚರ್ಚಿಸುವುದು<br>• ಕವಿತೆಯ ಆಶಯವನ್ನು ಓದಿ ಗ್ರಹಿಸುವುದು ಮತ್ತು ಆಸ್ವಾದಿಸುವುದು.<br>• ಸೂರ್ಯಾಸ್ತಮಾನದ ವರ್ಣನೆ ತಯಾರಿಸುವುದು. | • ಧ್ವನಿ ಮುದ್ರಿಕೆಗಳು<br>• ಚಿತ್ರಗಳು<br>• ಚಾರ್ಟುಗಳು | • ಹಾಡುಗಾರಿಕೆ<br>• ವರ್ಣನೆ |
| ತ್ಯಾಜ್ಯ ವಿಲೇವಾರಿ | • ನಾವು ಉಪಯೋಗವಿಲ್ಲದ ವಸ್ತುಗಳನ್ನು ಕಂಡ ಕಂಡಲ್ಲಿ ಎಸೆಯುತ್ತೇವೆ.<br>• ತ್ಯಾಜ್ಯವಸ್ತುಗಳಿಂದಾಗಿ ಪರಿಸರವು ಮಲಿನಗೊಳ್ಳುತ್ತದೆ.<br>• ತ್ಯಾಜ್ಯವಸ್ತುಗಳಿಂದ ಮತ್ತು ನಗರೀಕರಣದಿಂದಾಗಿ ಪರಿಸರ ಮಲಿನಗೊಳ್ಳುವುದರ ಕುರಿತು ಹಲವಾರು ಲೇಖನ ಕನ್ನಡ ಸಾಹಿತ್ಯದಲ್ಲಿದೆ.<br>• ಪ್ರಕೃತಿಯನ್ನು ಮಾಲಿನ್ಯಗಳಿಂದ ರಕ್ಷಿಸುವ ಜವಾಬ್ದಾರಿ ನಮ್ಮ ಮೇಲಿದೆ.<br>• ಕೆಲವು ತ್ಯಾಜ್ಯಗಳನ್ನು ಪುನರ್ಬಳಕೆ ಮಾಡುವುದರ ಮೂಲಕ ಪರಿಸರ ಮಾಲಿನ್ಯವನ್ನು ತಡೆಯಬಹುದು.<br>• ಪರಿಸರ ಮಾಲಿನ್ಯವನ್ನು ತಡೆಗಟ್ಟುವುದು ಮತ್ತು ಅದರ ವಿರುದ್ಧವಾದ ಜನ ಜಾಗೃತಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸುವುದು. | • ಲೇಖನಗಳನ್ನು ಓದಿ ಆಶಯಗಳನ್ನು ಗ್ರಹಿಸುವುದು.<br>• ಚರ್ಚಿಸುವುದು<br>• ಮನವಿ ಪತ್ರ ತಯಾರಿಸುವುದು<br>• ಪ್ರಬಂಧ ರಚಿಸುವುದು<br>• ಭಾಷಾ ಪ್ರಯೋಗಗಳನ್ನು ತಿಳಿಯುವುದು | • ದೃಶ್ಯ ಶ್ರಾವ್ಯ ತುಣುಕುಗಳು<br>• ಚಿತ್ರಗಳು<br>• ಸ್ಲೈಡುಗಳು<br>• ಚಾರ್ಟುಗಳು | • ಆಶಯ ಗ್ರಹಣ<br>• ಪ್ರಶ್ನೆಗಳು<br>• ಮನವಿ ಪತ್ರ<br>• ಪ್ರಬಂಧ |

| ಪಾಠದ ಹೆಸರು | ಆಶಯ / ಉದ್ದೇಶ | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
|---|---|---|---|---|
| ನೀರಿನ ಋಣ | • ನೀರು ಪ್ರಾಕೃತಿಕ ಸಂಪತ್ತು, ಅದನ್ನು ಮಿತವಾಗಿ ಬಳಸಬೇಕೆಂಬ ಮನೋಭಾವ ಬೆಳೆಸುವುದು.<br>• ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಮನೋಭಾವ ಬೆಳೆಸುವುದು.<br>• ಗಿಡ ಮರಗಳನ್ನು ಸರಿಯಾಗಿ ಪೋಷಿಸಿದರೆ ಅವುಗಳು ನಮ್ಮನ್ನು ಪೋಷಿಸುತ್ತವೆ. | • ಕಥೆಯನ್ನು ಓದಿ ಆಶಯ ಗ್ರಹಿಸುವುದು.<br>• ಬಿತ್ತಿ ಪತ್ರ ತಯಾರಿಸುವುದು.<br>• ಕಥೆ ಮುಂದುವರಿಸಿ ಬರೆಯುವುದು.<br>• ಸಂಭಾಷಣೆ ಬರೆದು ಅಭಿನಂದಿಸುವುದು | • ಆಶಯ ಗ್ರಹಣ ಪ್ರಶ್ನೆಗಳಿಗೆ ಉತ್ತರ ಬರೆಯುವುದು | • ಭಿತ್ತಿ ಪತ್ರ<br>• ಕಥೆ<br>• ಅಭಿನಯ |

# ಮುಂಜಾನೆಯ ಮೋಡಿ

**ಚಟುವಟಿಕೆಗಳು:**

ಮಕ್ಕಳಿಗೆ ಮುಂಜಾವದ ದೃಶ್ಯಗಳನ್ನೊಳಗೊಂಡ ವೀಡಿಯೋವನ್ನು ತೋರಿಸುವುದು. ಅಥವಾ ಮುಂಜಾನೆಯ ಸೊಬಗನ್ನು ಸಾರುವ ಚಿತ್ರಗಳನ್ನೋ ಸ್ಲೈಡುಗಳನ್ನೋ ಪ್ರದರ್ಶಿಸುವುದು.

ಮುಂಜಾನೆಯ ದೃಶ್ಯವನ್ನು ನೋಡಿದ ಬಳಿಕ ಆ ದೃಶ್ಯದ ಕುರಿತು ಬರೆದು ಮಂಡಿಸಲಿ.

❑ **ಸಾಮಾನ್ಯ ಚರ್ಚೆ**

- ಮುಂಜಾನೆಯ ಸೂರ್ಯೋದಯದ ದೃಶ್ಯವನ್ನು ನೋಡಿರುವಿರಾ?
- ಆಗ ಪ್ರಕೃತಿಯಲ್ಲಿ ಉಂಟಾಗುವ ಬದಲಾವಣೆಗಳು ಯಾವುವು?
- ಜೀವ ಜಾಲಗಳ ಚಟುವಟಿಕೆಗಳಲ್ಲಿ ಆಗುವ ಬದಲಾವಣೆಗಳಾವುವು?
- ಸೂರ್ಯೋದಯದ ವರ್ಣನೆಯಿರುವ ಕವನಗಳನ್ನು ಓದಿರುವಿರಾ?

  ಮಕ್ಕಳಿಗೆ ತಿಳಿದಿರುವ ಒಂದೆರಡು ಕವನಗಳನ್ನು ತರಗತಿಯಲ್ಲಿ ಹಾಡಿಸುವುದು.

  ಮುಂಜಾನೆಯನ್ನು ವರ್ಣಿಸಿ ಹಲವಾರು ಕವಿಗಳು ಕವನಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕೆ.ಎಸ್.ನಿಸಾರ್ ಅಹಮ್ಮದ್ ರಚಿಸಿದ 'ಮುಂಜಾನೆಯ ಮೋಡಿ' ಕವನವನ್ನು ಓದುವಂತೆ ಮಕ್ಕಳಲ್ಲಿ ಹೇಳುವುದು.

❑ **ಹಾಡಿರಿ**

ಮಕ್ಕಳು ಗುಂಪುಗಳಲ್ಲಿ ಕುಳಿತು ಕವಿತೆಗೆ ಸೂಕ್ತವಾದ ರಾಗವನ್ನು ಹಾಕಲಿ. ಬಳಿಕ ಪ್ರತಿಯೊಂದು ಗುಂಪು ಕವನವನ್ನು ರಾಗ, ತಾಳ, ಲಯ, ಭಾವಗಳೊಂದಿಗೆ ಹಾಡಲಿ. ಉತ್ತಮವಾಗಿ ಹಾಡಿದ ಗುಂಪನ್ನು ಅಭಿನಂದಿಸಲು ಮರೆಯುವುದಿಲ್ಲ ತಾನೆ? ಈ ಗುಂಪಿನಿಂದ ಸಾಹಿತ್ಯ ಸಭೆಯಲ್ಲಿ ಈ ಕವಿತೆಯನ್ನು ಹಾಡಿಸಬಹುದು.

ಬಳಿಕ ಅಧ್ಯಾಪಕರು ಇದರ ಧ್ವನಿ ಮುದ್ರಿಕೆಯನ್ನು ಮಕ್ಕಳಿಗೆ ಕೇಳಿಸಬಹುದು, ಅಥವಾ ಸ್ವತಃ ಅಧ್ಯಾಪಕರೇ ಹಾಡಬಹುದು.

ಈ ಕವನವನ್ನು 'ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದೆ ಕೋಟಿ ರೂಪಾಯಿ' ಪದ್ಯದ ಧಾಟಿಯಲ್ಲಿಯೂ ಹಾಡಬಹುದು.

❑ **ಚರ್ಚೆಸಿರಿ**

ಇಲ್ಲಿ ಕವಿಯ ಭಾವನೆಗಳನ್ನು ಅರಿತುಕೊಳ್ಳಲು ಈ ಚರ್ಚೆಯನ್ನು ಅಳವಡಿಸಲಾಗಿದೆ. ಪಾಠಪುಸ್ತಕದಲ್ಲಿ ಕೊಟ್ಟ ಎರಡು ಸಾಲುಗಳು ಪೂರ್ಣ ಕವಿತೆಯನ್ನು ಪ್ರತಿಬಿಂಬಿಸುತ್ತವೆ.

❑ **ಚರ್ಚಾ ಸೂಚಕಗಳು**

- ಮುಂಜಾನೆಯ ದೃಶ್ಯವನ್ನು ಸವಿಯಲು ಕಿವಿ ಮತ್ತು ಕಣ್ಣುಗಳಿದ್ದರೆ ಮಾತ್ರ ಸಾಲದು ಎಂದು ಕವಿ ಹೇಳಲು ಕಾರಣವೇನು?
- ಕವಿಯ ಅಭಿಪ್ರಾಯದಂತೆ ಮಾನವನ ಆಯುಷ್ಯ ಸಾರ್ಥಕವಾಗುವುದು ಯಾವಾಗ?

ಈ ರೀತಿ ಚರ್ಚೆಯ ಮೂಲಕ ಕವಿತೆಯ ಆಶಯವನ್ನು ಮನಗಾಣಲು ಪ್ರಯತ್ನಿಸುವುದು.

❑ **ಉತ್ತರಿಸಿರಿ**

ಮಕ್ಕಳು ಪಾಠಭಾಗದಲ್ಲಿ ನೀಡಿದ ಪ್ರಶ್ನೆಗಳಿಗೆ ಉತ್ತರ ಬರೆದು ಮಂಡಿಸಲಿ.

❑ **ಪರ್ಯಾಯ ಪದ ಬಳಸಿರಿ**

ಮಕ್ಕಳಿಗೆ ಹೊಸ ಪದಗಳನ್ನು ಹೊಸ ಸಂದರ್ಭದಲ್ಲಿ ಬಳಸುವ ಸಾಮರ್ಥ್ಯ ಉಂಟಾದರೆ ಮಾತ್ರ ಆ ಪದಗಳ ಪರಿಚಯವಾಗಿದೆ ಎಂದು ತಿಳಿಯಬಹುದು. ಕೇವಲ ಓದಿದ ಮಾತ್ರಕ್ಕೆ ಪದ ಪರಿಚಯವಾದರೆ ಸಾಲದು. ಇದಕ್ಕಾಗಿ ಪಾಠ ಭಾಗಗಳಲ್ಲಿ ಇಂತಹ ಚಟುವಟಿಕೆಗಳನ್ನು ಅಧ್ಯಾಪಕರು ನೀಡಬೇಕು.

**ಅಡಿಗೆರೆ ಎಳೆದ ಪದಗಳ ಪರ್ಯಾಯ ಪದಗಳು :**

ರವಿ : ಸೂರ್ಯ, ದಿನಮಣಿ, ಭಾನು, ಅರ್ಕ, ಆದಿತ್ಯ

ತಂಗಾಳಿ : ತಂಬೆಲರು, ಕುಳಿರ್ಗಾಳಿ

ಆಗಸ : ಬಾನು, ಆಕಾಶ, ನಭ

ಮೋಡ : ಮುಗಿಲು, ಮೇಘ

ಪರಿಮಳ : ಸುವಾಸನೆ, ಸುಗಂಧ

❑ **ವರ್ಣನೆ ಬರೆಯಿರಿ**

ಈ ಚಟುವಟಿಕೆಯು ಈ ಪಾಠದ ಪ್ರಧಾನ ವ್ಯವಹಾರ ರೂಪಕ್ಕೆ ಸಂಬಂಧಿಸಿದುದಾಗಿದೆ. ಆದುದರಿಂದ ಪ್ರಕ್ರಿಯಾ ಹಂತಗಳನ್ನು ದಾಟುತ್ತಾ ವರ್ಣನೆಯ ಉತ್ಪನ್ನವನ್ನು ನಿರೀಕ್ಷಿಸಬೇಕು.

**ಪ್ರಕ್ರಿಯಾ ಹಂತಗಳು ಯಾವುವು?**

**1. ಸಾಮಾನ್ಯ ಚರ್ಚೆ**

ಪ್ರಶ್ನೆಗಳನ್ನು ಕೇಳುವುದರ ಮೂಲಕ ಸೂರ್ಯಾಸ್ತದ ಆಶಯವನ್ನು ಮಕ್ಕಳು ಮನಗಾಣಬೇಕು.

**2. ಚರ್ಚಾ ಸೂಚಕಗಳು**

- ಸೂರ್ಯಾಸ್ತದ ಸಮಯದಲ್ಲಿ ರವಿಯು ಹೇಗೆ ಕಂಗೊಳಿಸುತ್ತಾನೆ?
- ಪಶು ಪಕ್ಷಿಗಳು ಏನು ಮಾಡುತ್ತವೆ?
- ತಂಗಾಳಿಯು ಯಾವ ಭಾಗದಿಂದ ಬೀಸುತ್ತದೆ?
- ಪ್ರಕೃತಿಯಲ್ಲುಂಟಾಗುವ ಬದಲಾವಣೆಗಳಾವುವು?
- ಮಾನವರು ಏನು ಮಾಡುತ್ತಾರೆ?

ಸಂಧ್ಯಾಸಮಯದಲ್ಲಿ ಕೆಲವು ಗಿಡ ಮರಗಳ ಎಲೆಗಳು ಮುಚ್ಚಿಕೊಳ್ಳುತ್ತವೆ. ಇದನ್ನು ಗ್ರಾಮೀಣ ಭಾಷೆಯಲ್ಲಿ ಗಿಡಮರಗಳು ಬಾಗಿಲು ಹಾಕುವುದು ಎನ್ನುತ್ತಾರೆ.

ಉದಾ: ಹುಣಸೆ, ದೇವದಾರ, ನಾಚಿಕೆಮುಳ್ಳು

**3. ಆಶಯಗಳನ್ನು ವರ್ಣಿಸುವುದು ಹೇಗೆ?**

ಮಕ್ಕಳನ್ನು ಪುನಃ ಕವನದತ್ತ ಒಯ್ಯುವುದು.

ಉದಾ: ಸೂರ್ಯೋದಯದ ಸಮಯದಲ್ಲಿ ಮೇಘಗಳ ಅಂಚು ಕಂಚಿನ ಬಣ್ಣ ತಾಳುತ್ತದೆ.

- ನವಿಲಿನ ಹೀಲಿಯ ಹೋಲಿದ ಬಾನಿನ ನೀಲಿಗೆ ಅನುಪಮ ಮೆರುಗು.

- ಹಚ್ಚನೆ ಸೀರೆಯ ಚೆಲು ಗಿರಿ ಕನ್ಯೆಗೆ ಝರಿ ಸಮ್ಮೋಹನ ಸೆರಗು.
- ಸಂಜೆಯ ಸೂರ್ಯನು ಬಂಗಾರದ ಉಂಡೆಯನು ಕಿತ್ತಳೆಯ ರಸದಲ್ಲಿ ಅದ್ದಿತೆಗೆವಂತೆ ಕಾಣುವನು.
- ಈ ರೀತಿಯಲ್ಲಿ ಹೋಲಿಸುತ್ತಾ ಆಶಯಗಳನ್ನು ಕ್ರಮೀಕರಿಸುವ ಸಾಮರ್ಥ್ಯವನ್ನು ಮಕ್ಕಳಲ್ಲಿ ಬೆಳೆಸಬೇಕಾಗಿದೆ.
- ವಿಶೇಷಣಗಳನ್ನು ಬಳಸುವುದು.

ಉದಾ: ಸೂರ್ಯನು ಹೊಂಬಣ್ಣದಿಂದ ಹೊಳೆಯುತ್ತಾನೆ.

ತಂಪಾದ ಗಾಳಿಯು ನಿಧಾನವಾಗಿ ಬೀಸುತ್ತದೆ.

ಮಕ್ಕಳ ಗುಂಪುಗಳಿಗೆ ಕೆಲವು ವರ್ಣನೆಯ ತುಣುಕುಗಳನ್ನು ಓದಲು ನೀಡುವುದು.

- ಬಳಿಕ ಮಕ್ಕಳು ವೈಯಕ್ತಿಕವಾಗಿ ವರ್ಣನೆ ತಯಾರಿಸಲಿ.
- ಕೆಲವರಿಂದ ಮಂಡನೆ.

**4. ವರ್ಣನೆ ಹೇಗಿರಬೇಕು? ಸೂಚಕಗಳನ್ನು ನಿರ್ಧರಿಸುವುದು.**

❑ **ಸೂಚಕಗಳು:**

1. ಆಶಯಕ್ಕೆ ಹೊಂದಿಕೊಂಡು ಬರೆಯಲಾಗಿದೆ.
2. ವಿಶೇಷಣ, ಹೋಲಿಕೆ, ಉಪಮೆ, ಸಂಕೇತ, ಪ್ರತಿಮೆಗಳನ್ನು ಬಳಸಲಾಗಿದೆ.
3. ಸೂರ್ಯಾಸ್ತಮಾನವನ್ನು ಕ್ರಮ ಪ್ರಕಾರ ವರ್ಣಿಸಲಾಗಿದೆ.
4. ವಾಕ್ಯರಚನೆಯಲ್ಲಿ ಸ್ವಂತಿಕೆ ಇದೆ.

- ಮಕ್ಕಳು ಗುಂಪಿನಲ್ಲಿ ಕುಳಿತುಕೊಂಡು ತಮ್ಮ ವರ್ಣನೆಯನ್ನು ಪ್ರತಿಯೊಬ್ಬರೂ ಮಂಡಿಸಲಿ. ಸೂಚಕಗಳ ಆಧಾರದಲ್ಲಿ ಯಾರ ವರ್ಣನೆ ಉತ್ತಮವಾಗಿದೆ ಎಂದು ಕಂಡುಕೊಳ್ಳಲಿ.
- ಗುಂಪಿನಿಂದ ಉತ್ತಮ ವರ್ಣನೆಯ ಮಂಡನೆ.
- ಅತ್ಯುತ್ತಮ ವರ್ಣನೆಯನ್ನು ಆರಿಸಲು ಮಕ್ಕಳಿಗೆ ಹೇಳುವುದು.
- ಬಳಿಕ ನೀವು ತಯಾರಿಸಿದ ವರ್ಣನೆಯನ್ನು ತರಗತಿಯಲ್ಲಿ ಮಂಡಿಸುವಿರಲ್ಲವೇ?

**ವರ್ಣನೆ ಹೀಗೂ ಇರಬಹುದಲ್ಲವೇ?**

## ಒಂದು ಸೂರ್ಯಾಸ್ತಮಾನ

ದಿನಮಣಿಯು ಪಶ್ಚಿಮ ದಿಗಂತದಲ್ಲಿ ನಿಧಾನವಾಗಿ ಜಾರುತ್ತಿದ್ದಾನೆ. ಅವನು ಕಿತ್ತಳೆಯ ರಸದಲ್ಲಿ ಅದ್ದಿದ ಬಂಗಾರದ ಉಂಡೆಯ ತೆರದಲ್ಲಿ ಕಾಣುತ್ತಿದ್ದಾನೆ. ಆಗ ಮೂಡಣದ ಬಾನಿನಲ್ಲಿರುವ ಮುಗಿಲುಗಳ ಮಾಲೆ ಹೊಂಬಣ್ಣದ ತೆರದಲ್ಲಿ ಕಂಗೊಳಿಸುತ್ತದೆ.

ಸೂರ್ಯನು ಮರೆಯಾಗಿ ಅಂಧಕಾರವು ಬೆನ್ನಟ್ಟುತ್ತಿದೆಯೆಲ್ಲಾ ಎಂದು ಕೂಗುತ್ತಾ ಹಕ್ಕಿಗಳು ತಮ್ಮ ತಮ್ಮ ಗೂಡಿಗೆ ಮರಳುತ್ತಿವೆ. ಪಡುವಣ ಆಗಸವು ರಕ್ತ ವರ್ಣದಿಂದ ಕಂಗೊಳಿಸುತ್ತಿರುವಾಗಲೇ ಮೇಘಗಳು ರವಿಯನ್ನು ಮರೆಮಾಚಿ ಕತ್ತಲನ್ನು ಸ್ವಾಗತಿಸುತ್ತಿವೆಯೋ ಎಂಬಂತೆ ತೋರುತ್ತಿದೆ. ಬೆಳಗಿನಿಂದ ಸಂಜೆ ತನಕ ಕತ್ತಲೊಡನೆ ಹೋರಾಡಿದ ರವಿಯ ಪ್ರಖರ ಕಿರಣಗಳು ಸೋತು ಸೊರಗಿವೆ. ಗಿಡ ಮರಗಳೂ ಕತ್ತಲಿಗೆ ಹೆದರಿ ತಮ್ಮ ಬಾಗಿಲುಗಳನ್ನು ಮುಚ್ಚಿ ಮೌನವಾಗಿ ನಿಂತಿವೆ. ನಿಶಾಚರಿಗಳು

ಇದೇ ತಕ್ಕ ಸಮಯವೆಂದು ತಮ್ಮ ಗೂಡುಗಳಿಂದ ಆಹಾರ ಹುಡುಕುತ್ತಾ ಹೊರ ಹೊರಡುತ್ತಿವೆ. ಮೆಲ್ಲ ಮೆಲ್ಲನೆ ಬುವಿಯಲ್ಲಿ ನಿಶೆಯು ಆವರಿಸುತ್ತಿದೆ. ನಿಶೆಯ ನಶೆಗೆ ದೇವನೇ ಬಲಿಯಾಗುವಾಗ ಹುಲು ಮಾನವನು ಏನಾಗಬೇಡ?

## ❑ ಪ್ರಾಸ ಪದಗಳನ್ನು ಗುರುತಿಸಿರಿ

ಪ್ರಾಸ ಪದಗಳನ್ನು ಗುರುತಿಸುವುದೂ ರಸಾಸ್ವಾದನೆಯ ಒಂದು ಭಾಗವಾಗಿದೆ. ಇವುಗಳಿಂದಾಗಿ ಕವಿತೆಗಳಿಗೆ ಗೇಯತೆ ಬರುತ್ತದೆಯಲ್ಲವೇ? ಇದಕ್ಕಾಗಿ ಈ ಚಟುವಟಿಕೆಯನ್ನು ಇಲ್ಲಿ ನೀಡಲಾಗಿದೆ.

ಸೂರ್ಯ – ಸೌಂದರ್ಯ, ವಾದ್ಯ – ಚೋದ್ಯ, ಹೊಳಪು – ಬಿಳುಪು, ಮೆರುಗು – ಸೆರಗು.

## ❑ ಪದ ಜೋಡಿಸಿರಿ

ಮಕ್ಕಳಿಗೆ ಪದಗಳನ್ನು ವಿಂಗಡಿಸಲು ಈಗಾಗಲೇ ತಿಳಿದಿದೆ. ಅದೇ ರೀತಿ ಎರಡು ಅಥವಾ ಎರಡಕ್ಕಿಂತ ಅಧಿಕ ಪದಗಳನ್ನು ಜೋಡಿಸಿ ಬರೆಯುವ ಕಲೆ ಕರಗತವಾಗಬೇಕು. ಅದು ಪ್ರತ್ಯೇಕ ಪದಗಳಾಗಿ ಕೊಡದೇ ಆಶಯಗಳ ಮೂಲಕವೇ ನಡೆಯಬೇಕು. ಅದಕ್ಕಾಗಿ ಇಂತಹ ಅನೇಕ ವೈವಿಧ್ಯಮಯ ಆಶಯಗಳನ್ನು ತರಗತಿಗಳಲ್ಲಿ ಕೊಡುವಿರಲ್ಲವೇ?

ಉದಾ: ಸಿದ್ಧಾರ್ಥನು ಒಬ್ಬ ರಾಜಪುತ್ರನು ಇವನನ್ನು ಉಳಿದು ಇವನ ತಾಯಿ ತಂದೆಯರಿಗೆ ಬೇರೆ ಮಕ್ಕಳು ಇರಲಿಲ್ಲ . ರಾಜ ಶುದ್ಧೋಧನನೇ ಇವನ ತಂದೆ; ಮಹಾರಾಣಿ ಮಾಯಾ ದೇವಿಯು ಇವನ ತಾಯಿ. ಅನೇಕ ವರ್ಷ ಬಗೆ ಬಗೆಯಾಗಿ ದೇವರಿಗೆ ಹರಕೆ ಹೊತ್ತು ಮಾಯಾದೇವಿಯು ಸಿದ್ಧಾರ್ಥನೆಂಬ ಈ ಪುತ್ರನನ್ನು ತನ್ನ ವೃದ್ಧಾಪ್ಯದಲ್ಲಿ ಪಡೆದಿದ್ದಳು. ಆದರೆ ತನ್ನ ಕಂದನ ತೊದಲು ನುಡಿಗಳನ್ನು ಕೇಳಿ ಆನಂದಿಸುವ ಸುಯೋಗವು ಆ ಮಾತೆಗೆ ಇರಲಿಲ್ಲ.

## ಪೂರಕ ಓದಿಗೆ

# ಚಂದಿರ

ನೀಲ ನಿರ್ಮಲದಾಗಸದಿ ನಿಶ್ಚಿಂತನಾಗಿಹ ಚಂದಿರ
ಬಾನು ತೊಳಗಿದೆ ಬುವಿಯು ಬೆಳಗಿದೆ ಶುದ್ಧ ಪಳುಕಿನ ಮಂದಿರ
ನಿನ್ನ ನಗೆ ತನಿವೆಳಕ ತುಳುಕಿಸಿ ಸೂರೆಯಾಗಿದೆ ಸುಂದರ
ನಿನ್ನ ದಯೆ ಸುಧೆಯಾಗಿ ಸುರಿದಿದೆ ಬೆಳ್ಳಿಗಿರಣದ ಹಂದರ
ಚಿಕ್ಕೆ ಚಕ ಚಕ ಜೊನ್ನ ಪೂರದಿ ತೇಲಿ ಮುಳುಗಿವೆ ಮೋಹನ
ಜಗದ ಜಡ ಬಡ ಜೀವಗೇಹದಿ ಶಾಂತಿಯಮೃತದ ಸೇಚನ
ಬಾನ ಮೂಲೆಯ ಮೋಡಪಡೆ ಮುದಗೊಂಡು ಬರುತಿದೆ ತೇಲುತ
ಮದುಮಗನ ಸ್ವಾಗತಿಸೆ ನಿಬ್ಬಣ ಹೊರಟ ಸಂಭ್ರಮ ಹೋಲುತ
ಶಾಂತಿ ಬೆಳದಿಂಗಳಿನ ಹಾಲಲಿ ಕರಗಿದಂತಿದೆ ತಿಂಗಳ
ಸುಯ್ಯೆಲರು ಹಾಯಾಗಿ ತೀಡಿದೆ ಹದುಳವೆನೆ ಶುಭ ಮಂಗಳ
ದೂರದಿಂದಲಿ ಕೇಳಿ ಬರುತಿದೆ ಕೊಳಲ ಕೊರಳಿನ ಗಾಯನ
ಸುಗ್ಗಿಯಲಿ ಹಿರಿಹಿಗ್ಗಿ ರಿಂಗಣಗುಣಿದು ಹಾಡಿದೆ ಜನಮನ,
ಇಂಥ ಸಮಯದಿ ಹಂಬಲದಿ ಬಾಯ್ದೆರೆದ ಸಿಂಪಿದು ಭಾವನ
ತರಗೆಲೆಯು ಗಿರುಕೆನಲು ಮೌನವೆ ಬಿಕ್ಕಿದೊಲು ಬರಿಕಲ್ಪನ

**– ಚೆನ್ನವೀರ ಕಣವಿ**

## ಚೆಲುವು ಎಲ್ಲಿದೆ

ನಿತ್ಯ ಬೆಳಗು – ಬೈಗಿನಲ್ಲಿ
ಬಾನು ಬುವಿಯನಪ್ಪುವಲ್ಲಿ
ಅರುಣರಾಗ ವೊಪ್ಪುವಲ್ಲಿ
ಚೆಲುವು ತುಂಬಿ ನಿಂದಿದೆ.

ಹಗಲು ಹೊನ್ನ ಬೆಳಕಿನಲ್ಲಿ
ಇರುಳ ಹಾಲು ಜೊನ್ನದಲ್ಲಿ
ಮಿಂದ ಜಗದ ಹಾಸದಲ್ಲಿ
ಚೆಲುವು ತುಂಬಿ ನಿಂದಿದೆ.

ಸುತ್ತ ಕವಿದ ಕತ್ತಲಲ್ಲಿ
ನಭದ ಮೇಲು ಜೊಂಪದಲ್ಲಿ
ಸಾಲು ಸೊಡರು ಮಿನುಗುವಲ್ಲಿ
ಚೆಲುವು ತುಂಬಿ ನಿಂದಿದೆ.

ನೀಲ ಬಾನ ಕಡಲಿನಲ್ಲಿ
ತಂಪಿನೆಲರ ತೀಟದಲ್ಲಿ
ಮುಗಿಲ ತೆಪ್ಪ ತೇಲುವಲ್ಲಿ
ಚೆಲುವು ತುಂಬಿ ನಿಂದಿದೆ.

ಬನದ ಸಿರಿ ಬಸಂತದಲ್ಲಿ
ಬಿರಿದ ಸುಮದ ತೊಡುಗೆಯಲ್ಲಿ
ಕಂಪು ಸೊಂಪು ಬೀರುವಲ್ಲಿ
ಚೆಲುವು ತುಂಬಿ ನಿಂದಿದೆ.

ಮುಂಗಾರಿನ ಸೋನೆಯಲ್ಲಿ
ತೊಯ್ದು ತಣಿದ ಭೂಮಿಯಲ್ಲಿ
ಹುಲ್ಲ ಹಸುರು ಮಿನುಗುವಲ್ಲಿ
ಚೆಲುವು ತುಂಬಿ ನಿಂದಿದೆ.

'ಸುಯ್ಯ' ಸುಯ್ವ ಗಾಳಿಯಲ್ಲಿ
ವೃಕ್ಷ, ಫಲದ ಭಾರದಲ್ಲಿ
ಬಾಗಿ ತೂಗಿ ತೊನೆಯುವಲ್ಲಿ
ಚೆಲುವು ತುಂಬಿ ನಿಂದಿದೆ.

ಹಸುಳೆ ಹಾಲುಗೆನ್ನೆಯಲ್ಲಿ
ನಗೆಯ ತಿಂಗಳನ್ನು ಚೆಲ್ಲಿ
ಲೋಕದೆದೆಯ ತಣಿಸುವಲ್ಲಿ
ಚೆಲುವು ತುಂಬಿ ನಿಂದಿದೆ.

ಹೇಳಲೇನು ಅಲ್ಲಿ–ಇಲ್ಲಿ?
ನೋಟ ನೋಡದಿರವಿನಲ್ಲಿ
ಚೆಲುವು ತುಂಬಿ ನಿಂದಿದೆ.

**– ಪಳಕಳ ಸೀತಾರಾಮ ಭಟ್ಟ**

## ತ್ಯಾಜ್ಯ ವಿಲೇವಾರಿ

- **ಚಟುವಟಿಕೆಗಳು**

ನಿಮ್ಮ ಮನೆ, ಶಾಲೆ ಪರಿಸರವನ್ನು ನೀವು ಶುಚಿಯಾಗಿರಿಸುತ್ತೀರಲ್ಲವೇ? ಯಾಕೆ?

ಪರಿಸರ ಮಾಲಿನ್ಯದಿಂದ ನಮಗಾಗುವ ತೊಂದರೆಗಳಾವುವು? ಮೊದಲಾದ ಪ್ರಶ್ನೆಗಳನ್ನು ಕೇಳುತ್ತಾ ವಿದ್ಯಾರ್ಥಿಗಳೊಡನೆ ಮಾತುಕತೆ ನಡೆಸುವುದು. ಅನಂತರ ನಗರಗಳ ಕೊಳೆಗೇರಿಗಳ ವೀಡಿಯೋವನ್ನು ತೋರಿಸುವುದು.

– ನಗರಗಳಲ್ಲಿ ಹಲವಾರು ಕೊಳೆಗೇರಿಗಳಿವೆ. ಇದಕ್ಕೇನು ಕಾರಣ?
– ಇವುಗಳ ಮಧ್ಯೆ ಜೀವಿಸುವ ಜನರ ಪಾಡೇನಾಗಿರಬಹುದು?
– ಕೊಳೆಗೇರಿಗಳ ಸಂಖ್ಯೆ ಹೆಚ್ಚುತ್ತಾ ಹೋದರೆ ಏನಾಗಬಹುದು?

ಇತ್ಯಾದಿ ಪ್ರಶ್ನೆಗಳನ್ನು ಮುಂದಿಟ್ಟು ಚರ್ಚೆ ನಡೆಸುತ್ತಾ ಪಾಠ ಪ್ರವೇಶ ಮಾಡಬಹುದು.

### ❑ ಓದುವಿಕೆ ಹೇಗಿರಬೇಕು

- ಮಕ್ಕಳು ವೈಯುಕ್ತಿಕವಾಗಿ ಮೌನ ಓದು ನಡೆಸಲಿ.
- ಇದಕ್ಕಾಗಿ ಅರ್ಧ ಗಂಟೆ ಸಮಯವನ್ನು ಕೊಡಬಹುದು.
- ಅರ್ಥವಾಗದ ವಿಚಾರಗಳನ್ನು ಗುಂಪಿನಲ್ಲಿ ಚರ್ಚಿಸಿ ಕಂಡುಕೊಳ್ಳಲಿ.
- ಕೆಲವರಿಗೆ ತಮಗಿಷ್ಟವಾದ ಭಾಗವನ್ನು ಗಟ್ಟಿಯಾಗಿ ಓದಿ ಮಂಡಿಸಲು ಹೇಳುವುದು.

ಈ ಸಂದರ್ಭದಲ್ಲಿ ಸರಣಿ ಓದು ಅಥವಾ ಖೋ ಖೋ ಓದು ನಡೆಸಬಹುದು. ಕೊನೆಗೆ ಅಧ್ಯಾಪಕ ಪೂರ್ಣ ಪಾಠವನ್ನು ಸ್ವರಭಾರದೊಂದಿಗೆ ಓದಿ ಮಂಡಿಸುವುದು.

### ಓದುವಿಕೆಯ ತಂತ್ರಗಳು

ಮೌನ ಓದು

ಬಾಯ್ದೆರೆ ಓದು

ಸರಣಿ ಓದು

ಅಧ್ಯಾಪಕರ ಓದು

ಪದಗುರುತಿಸಿ ಓದು

ಛೇ ಛೇ ಓದು

ಪ್ರಶ್ನೆ ತಯಾರಿ

ಪ್ರಶ್ನೋತ್ತರ ಸ್ಪರ್ಧೆ

ಪದ ಹುಡುಕುವುದು

ಪದ ಹೊಡೆಯುವ ಆಟ

ಇಷ್ಟವಾದ ಸಾಲುಗಳು/ಭಾಗಗಳು

ಹೊಸ ಪದಗಳು ಗುರುತಿಸುವುದು

ಸಾರಾಂಶ ಹೇಳುವುದು

ಚಿತ್ರ ರಚನೆ

ಕ್ರಮೀಕರಿಸುವುದು

ಸರಿ ತಪ್ಪು ಹೇಳುವುದು

ಖೋ ಖೋ ಓದು

ಈ ತಂತ್ರಗಳ ಹೆಚ್ಚಿನ ವಿವರಗಳನ್ನು ಕ್ಲಸ್ಟರ್ ತರಬೇತಿಗಳಿಂದ ಪಡೆಯುವುದು.

### ❑ ಚರ್ಚಿಸಿರಿ

ಸರಿಯಾಗಿ ವಿಲೇವಾರಿ ಮಾಡಿದರೆ ತ್ಯಾಜ್ಯ ವಸ್ತುಗಳೂ ದೇಶದ ಸಂಪತ್ತಾಗುತ್ತವೆ. ಕಂಡಕಂಡಲ್ಲಿ ಬಿಸಾಡಿದರೆ ಪರಿಸರ ನರಕವಾಗುತ್ತದೆ. ಲೇಖಕರ ಈ ಮಾತಿನ ಬಗ್ಗೆ ಮಕ್ಕಳ ಅಭಿಪ್ರಾಯಗಳನ್ನು ಚರ್ಚೆಯ ಮೂಲಕ ತಿಳಿದುಕೊಳ್ಳಬೇಕು.

ನಮ್ಮಲ್ಲಿ ಉಪಯೋಗ ಶೂನ್ಯವಾದ ವಸ್ತು ಎಂಬುದಿಲ್ಲ. ಅವುಗಳನ್ನು ಸರಿಯಾದ ವಿಧದಲ್ಲಿ ಮರುಬಳಕೆ ಮಾಡಬೇಕೆಂಬುದು ಲೇಖಕರ ಅಭಿಪ್ರಾಯವಾಗಿದೆ.

ಉದಾ: ಪ್ಲಾಸ್ಟಿಕ್‌ಗಳನ್ನು ಡಾಮರು ಹಾಕಲೂ, ಡೀಸಲು ತಯಾರಿಸಲೂ ಬಳಸಬಹುದು. ಕೊಳೆಯುವ ವಸ್ತುಗಳನ್ನು ಗೊಬ್ಬರವಾಗಿಯೂ ಮಾಡಬಹುದು ಎಂಬುದಾಗಿ ಚರ್ಚೆಯನ್ನು ಕ್ರೋಡೀಕರಿಸಬಹುದು.

### ❑ ಉತ್ತರಿಸಿರಿ

ಪಾಠಭಾಗಕ್ಕೆ ಸಂಬಂಧಿಸಿದ ಆಶಯ ಗ್ರಹಣ ಪ್ರಶ್ನೆಗಳಿಗೆ ಮಕ್ಕಳು ವೈಯಕ್ತಿಕವಾಗಿ ಉತ್ತರ ಬರೆದು ಮಂಡಿಸಲಿ.

### ❑ ಮನವಿ ಪತ್ರ ಬರೆಯಿರಿ

ಪತ್ರಗಳಲ್ಲಿ ಹಲವು ವಿಧ. ಅವುಗಳಲ್ಲಿ ಮನವಿ ಪತ್ರವೂ ಒಂದು. ವ್ಯಕ್ತಿಗೋ ಸಮಾಜಕ್ಕೋ ಸಮಸ್ಯೆಗಳು ಎದುರಾದಾಗ ಅದನ್ನು ಪರಿಹರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ ವಿನಂತಿಸುವ ವಿಧಾನವು ಮಕ್ಕಳಿಗೆ ಕರಗತವಾಗಬೇಕು. ಮಕ್ಕಳು ಸಮಾಜದ ಅಂಗ ಮುಂದಿನ ಪ್ರಜೆಗಳು, ಅವರಿಗೆ ವ್ಯವಹರಿಸುವ ನೈಪುಣ್ಯವು ಶಾಲೆಗಳಿಂದಲೇ ದೊರೆಯಬೇಕಾಗಿದೆ.

- ಗುಂಪುಗಳಿಗೆ ಕೆಲವು ವೈವಿಧ್ಯಮಯ ಮನವಿ ಪತ್ರಗಳನ್ನು ಓದಲು ನೀಡುವುದು.
- ಬಳಿಕ ಸಾರ್ವಜನಿಕ ಸ್ಥಳದಲ್ಲಿರುವ ತ್ಯಾಜ್ಯ ವಿಲೇವಾರಿ ಕೈಗೊಳ್ಳುವಂತೆ ಸ್ಥಳೀಯ ಆಡಳಿತೆಯವರಿಗೆ ಮನವಿ ಪತ್ರವೊಂದರನ್ನು ಮಕ್ಕಳು ವೈಯಕ್ತಿಕವಾಗಿ ತಯಾರಿಸಲಿ.

ಕೆಲವರಿಂದ ಮಂಡನೆ, ಚರ್ಚೆ, ಗ್ರೇಡಿಂಗ್ ಸೂಚಕಗಳನ್ನು ಕಂಡುಕೊಳ್ಳುವುದು.

**ಚೆಕ್‌ಲಿಸ್ಟ್**

| | ಉತ್ತಮ | ಸಾಧಾರಣ | ಕನಿಷ್ಠ |
|---|---|---|---|
| • ಮನವಿ ಪತ್ರದ ಚೌಕಟ್ಟನ್ನು ಪಾಲಿಸಲಾಗಿದೆ. (ಸ್ಥಳ, ದಿನಾಂಕ, ಇವರಿಂದ, ಇವರಿಗೆ ಆರಂಭ, ಮುಕ್ತಾಯ) | ☐ | ☐ | ☐ |
| • ಸಮಸ್ಯೆಯ ಗಂಭೀರತೆಯನ್ನು ಮನದಟ್ಟು ಮಾಡುವಲ್ಲಿ ಸಫಲವಾಗಿದೆ. (ತ್ಯಾಜ್ಯದಿಂದ ಉಂಟಾದ ತೊಂದರೆಗಳನ್ನು ವಿವರಿಸಲಾಗಿದೆ) | ☐ | ☐ | ☐ |
| • ಪದ, ವಾಕ್ಯ ಪ್ರಯೋಗಗಳು ಮನವಿ ಪತ್ರಕ್ಕೆ ಸೂಕ್ತವಾಗಿವೆ. | ☐ | ☐ | ☐ |
| • ವಿಷಯಗಳನ್ನು ಕ್ರಮಾನುಗತವಾಗಿ ಬರೆಯಲಾಗಿದೆ. | ☐ | ☐ | ☐ |
| • ಆಶಯವೂ ಸರಳವೂ ಸ್ಪಷ್ಟವೂ ಆಗಿದೆ. | | | |

- ಮಕ್ಕಳು ತಯಾರಿಸಿದ ಮನವಿ ಪತ್ರವನ್ನು ಚೆಕ್‌ಲಿಸ್ಟ್ ಆಧಾರದಲ್ಲಿ ಪರಸ್ಪರ ಓದಿ ಮೌಲ್ಯ ನಿರ್ಣಯ ಮಾಡುವುದು.
- ಉತ್ತಮವಾದ ಮನವಿ ಪತ್ರವನ್ನು ಚಾರ್ಟಿನಲ್ಲಿ ಬರೆದು ಪ್ರದರ್ಶಿಸುವುದು.
- ಅದರಲ್ಲಿರುವ ತಪ್ಪುಗಳನ್ನು ಗುರುತಿಸಿ ಅಧ್ಯಾಪಕರ ಸಹಾಯದೊಂದಿಗೆ ಸರಿಪಡಿಸುವುದು.
- ಅಧ್ಯಾಪಕರು ಬರೆದ ಮನವಿಪತ್ರವನ್ನು ಚಾರ್ಟಿನಲ್ಲಿ ಬರೆದು ತೂಗಿ ಹಾಕುವುದು.

# ಮನವಿ

ಗುಂಟೂರು

10.7.2013

ಇವರಿಂದ

ಶ್ವೇತಾ ಆರ್.

ಸರಕಾರಿ ಕಿರಿಯ ಪ್ರಾಥಮಿಕ ಶಾಲೆ

ಗುಂಟೂರು

ಇವರಿಗೆ

ಪಂಚಾಯತು ಅಧ್ಯಕ್ಷರು

ಗುಂಟೂರು ಗ್ರಾಮ ಪಂಚಾಯತು

ಗುಂಟೂರು

ಸ್ವಾಮಿ,

ವಿಷಯ: ಶಾಲಾ ಪರಿಸರದಲ್ಲಿ ರಾಶಿ ಬಿದ್ದುಕೊಂಡಿರುವ ತ್ಯಾಜ್ಯಗಳನ್ನು ವಿಲೇವಾರಿ ಮಾಡುವುದರ ಬಗ್ಗೆ.

. . .

ನಮ್ಮ ಶಾಲೆ ರಾಜ್ಯ ಹೆದ್ದಾರಿಯ ಪಕ್ಕದಲ್ಲಿದ್ದು ಪಟ್ಟಣಕ್ಕಿಂತ ಸ್ವಲ್ಪ ದೂರದಲ್ಲಿದೆ. ಪಟ್ಟಣದ ಜನರು, ಅಂಗಡಿಯವರು, ಹೋಟೇಲಿನವರು ಮತ್ತು ದಾರಿಹೋಕರು ಕಾಗದ, ಪ್ಲಾಸ್ಟಿಕ್ ಚೀಲ, ರಬ್ಬರು, ಕೊಳೆತ ವಸ್ತುಗಳು, ಗಾಜಿನ ಬಾಟ್ಲಿಗಳು ಇತ್ಯಾದಿ ತ್ಯಾಜ್ಯ ವಸ್ತುಗಳನ್ನು ಶಾಲೆಯ ಪಕ್ಕದ ತೋಪಿನಲ್ಲಿ ಎಸೆದು ಹೋಗುತ್ತಿದ್ದಾರೆ. ನಾವು ಬಿಡುವಿನ ಸಮಯದಲ್ಲಿ ಈ ತೋಪಿನಲ್ಲಿ ಆಟವಾಡುತ್ತೇವೆ, ತಿರುಗಾಡುತ್ತೇವೆ. ಆದರೆ ಇತ್ತೀಚೆಗೆ ನಮಗೆ ಮೂಗು ಮುಚ್ಚಿಕೊಂಡರೂ ತಿರುಗಾಡಲು ಅಸಾಧ್ಯವಾದ ದುರ್ನಾತ ತುಂಬಿದೆ. ನಮಗೆ ಪ್ರಶಾಂತ ವಾತಾವರಣವನ್ನು ಕೊಡುತ್ತಿದ್ದ ಈ ತೋಪು ಇಂದು ಕೊಳಚೆಯ ಕೊಂಪೆಯಾಗಿದೆ. ಇದರಿಂದಾಗಿ ಶಾಲಾ ಪರಿಸರದಲ್ಲಿ ನೊಣ, ಸೊಳ್ಳೆಗಳ ಕಾಟ ಹೆಚ್ಚಾಗಿದೆ. ಇದರ ಪರಿಣಾಮವಾಗಿ ಕೆಲವು ಮಕ್ಕಳು ಜ್ವರ, ವಾಂತಿ ಭೇದಿ ಇತ್ಯಾದಿ ಸಾಂಕ್ರಾಮಿಕ ರೋಗಳಿಗೆ ತುತ್ತಾಗಿದ್ದಾರೆ. ನಮ್ಮ ಮಧ್ಯಾಹ್ನದ ಊಟಕ್ಕೂ ಅಡಚಣೆಯಾಗಿದೆ. ಇದು ಹೀಗೆ ಮುಂದುವರಿದರೆ ಶಾಲೆ ಯ ಮಕ್ಕಳೆಲ್ಲರೂ ಅನಾರೋಗ್ಯದಿಂದ ಬಳಲುವುದರಲ್ಲಿ ಸಂಶಯವಿಲ್ಲ.

ನಮ್ಮ ಮತ್ತು ಸಮಾಜದ ಸ್ವಾಸ್ಥ್ಯಕ್ಕಾಗಿ ಇಲ್ಲಿ ರಾಶಿಬಿದ್ದಿರುವ ತ್ಯಾಜ್ಯಗಳನ್ನು ವಿಲೇವಾರಿ ಮಾಡಬೇಕಾಗಿದೆ. ತಾವು ಇದರ ಬಗ್ಗೆ ಗಮನ ಹರಿಸಿ ಆದಷ್ಟು ಬೇಗನೇ ಕ್ರಮ ಕೈಗೊಳ್ಳಬೇಕಾಗಿ ವಿನಮ್ರವಾಗಿ ವಿನಂತಿಸುತ್ತೇವೆ.

ಇತಿ ತಮ್ಮ ವಿಶ್ವಾಸಿ

**ಶ್ವೇತಾ ಆರ್.**

## ❑ ಪ್ರಬಂಧ ಬರೆಯಿರಿ

ಕೇವಲ ಆಲಿಸುವುದರಿಂದಲೂ ಓದುವುದರಿಂದಲೂ ನಮ್ಮ ಭಾಷಾ ಜ್ಞಾನ ವೃದ್ಧಿಯಾಗುವುದಿಲ್ಲ. ಗಳಿಸಿದ ಪದ ಸಂಪತ್ತನ್ನು ಯೋಗ್ಯ ಸಂದರ್ಭಗಳಲ್ಲಿ ಬಳಸುವುದು ಗೊತ್ತಿದ್ದರೆ ಭಾಷಾ ಜ್ಞಾನ ಬೆಳೆಯುತ್ತದೆ. ಭಾಷಾ ಜ್ಞಾನವು ಬೆಳೆಯಲು ಪ್ರಬಂಧ ರಚನೆ ಪ್ರಧಾನ ಸಾಧನವಾಗಿದೆ. ಮಾತ್ರವಲ್ಲ ಭಾಷಾಜ್ಞಾನವನ್ನು ಅಳೆಯುವ ಮಾಪಕವೂ ಆಗಿದೆ. ಇದಕ್ಕಾಗಿ ಪ್ರತಿ ಘಟಕದಲ್ಲೂ ಒಂದೆರಡು ಇಂತಹ ವ್ಯವಹಾರ ರೂಪಗಳನ್ನು ರಚಿಸಲು ಮಕ್ಕಳಿಗೆ ಅವಕಾಶ ಮಾಡಿಕೊಡಬೇಕು. ಇಲ್ಲಿ 'ಪರಿಸರ ಶುಚಿತ್ವದಲ್ಲಿ ವಿದ್ಯಾರ್ಥಿಗಳ ಪಾತ್ರ' ಎಂಬ ಪ್ರಬಂಧವನ್ನು ರಚಿಸಬೇಕಾಗಿದೆ. ಪ್ರಬಂಧ ರಚನೆಯು ವಿವಿಧ ಪ್ರಕ್ರಿಯೆಗಳ ಹಂತಗಳನ್ನು ದಾಟಿ ಸಾಗಲಿ. ಕೊನೆಯಲ್ಲಿ ಅಧ್ಯಾಪಕರ ಪ್ರಬಂಧ ಮಂಡನೆಯ ಬಳಿಕ ಮಕ್ಕಳು ತಮ್ಮ ಪ್ರಬಂಧವನ್ನು ಪುನಃ ಉತ್ತಮ ಪಡಿಸಿ ತರಗತಿಯಲ್ಲೊಂದು ವಿಚಾರ ಸಂಕಿರಣ ನಡೆಸುವುದು.

## ಪರಿಸರ ಶುಚಿತ್ವದಲ್ಲಿ ವಿದ್ಯಾರ್ಥಿಗಳ ಪಾತ್ರ

ನೆಲ, ಜಲ, ಅಂತರಿಕ್ಷ, ಕಾಡು, ಪ್ರಾಣಿ ಪಕ್ಷಿಗಳು ನೆಲದೊಳಗೆ ಹುದುಗಿರುವ ಖನಿಜ ಸಂಪತ್ತು ಮುಂತಾದುವುಗಳನ್ನೆಲ್ಲ ಒಟ್ಟಾಗಿ ಪರಿಸರ ಎನ್ನುತ್ತೇವೆ. ಪರಿಸರವು ಎಲ್ಲ ರೀತಿಯ ಜೈವಿಕ, ಅಜೈವಿಕ ವಸ್ತುಗಳನ್ನು ಒಳಗೊಳ್ಳುವುದು. ಯಾವ ವಸ್ತುಗಳು ಅಥವಾ ಜೀವಿಗಳು ಪ್ರಾಣಿಗಳ ಮೇಲೆ ಪ್ರಭಾವ ಬೀರಬಲ್ಲವೋ ಮತ್ತು ಯಾವುವು ಸಕಲ ಜೀವಿಗಳ ಪ್ರಭಾವಕ್ಕೆ ಒಳಗಾಗುತ್ತವೆಯೋ ಅವೆಲ್ಲವೂ ಪರಿಸರದ ವ್ಯಾಪ್ತಿಯಲ್ಲಿ ಸೇರಿಕೊಳ್ಳುತ್ತದೆ. ಎಲ್ಲಾ ಸಜೀವ ಮತ್ತು ನಿರ್ಜೀವ ರಾಶಿಗಳು ಪರಸ್ಪರ ಅವಲಂಬಿತವಾಗಿರುವುದರಿಂದ ಪರಿಸರ ಒಂದು ಸಂಕೀರ್ಣ ವ್ಯವಸ್ಥೆಯಾಗಿರುವುದು.

ಇಂದು ಕೈಗಾರಿಕಾಭಿವೃದ್ಧಿಯ ನೆಪದಲ್ಲಿ ಪರಿಸರವು ಮಲಿನವಾಗುತ್ತಿದೆ. ಎಲ್ಲೆಂದರಲ್ಲಿ ರಾಶಿ ಬೀಳುತ್ತಿರುವ ಪ್ಲಾಸ್ಟಿಕ್ ತ್ಯಾಜ್ಯಗಳು ಗಂಭೀರ ಸಮಸ್ಯೆಗಳನ್ನು ನಿರ್ಮಿಸಿವೆ. ಪ್ರಧಾನ ರಸ್ತೆ ಬದಿಗಳಲ್ಲಿ ಸಂಚರಿಸುವುದೇ ದುಸ್ತರವಾಗಿದೆ. ಏಕೆಂದರೆ ಹೋಟೇಲುಗಳು, ಮಾಂಸದ ಅಂಗಡಿಗಳು ಕೊಳೆಯುವ ತ್ಯಾಜ್ಯಗಳನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಸಿ ರಸ್ತೆ ಬದಿಯಲ್ಲಿರುವ ಪೊದೆಗಳಿಗೆ ಎಸೆಯುತ್ತಿವೆ. ಅವುಗಳ ಮೇಲೆ ಕುಳಿತು ಕೊಳ್ಳುವ ನೊಣಗಳು ಪರಿಸರದಲ್ಲಿ ಜನರಿಗೆ ಸಾಂಕ್ರಾಮಿಕ ರೋಗಗಳನ್ನು ಹರಡುತ್ತಿವೆ. ಇನ್ನು ರಬ್ಬರ್, ಗಾಜು, ಗೆರಟೆ ಇನ್ನಿತರ ಕೊಳೆಯದ ಘನ ತ್ಯಾಜ್ಯಗಳೂ ಮನುಷ್ಯರನ್ನು ಪ್ರಾಣಿಗಳನ್ನು ಕಾಡುತ್ತಿವೆ. ಇವುಗಳಲ್ಲಿ ಮಳೆ ನೀರು ನಿಂತು ಸೊಳ್ಳೆಗಳ ಸಂತಾನ ಹೆಚ್ಚಾಗುತ್ತಿವೆ. ಇದು ಡೆಂಗ್ಯೂ, ಮಲೇರಿಯಾ, ಚಿಕುನ್‌ಗುನ್ಯಾ, ಆನೆಕಾಲು ಮುಂತಾದ ರೋಗಗಳಿಗೆ ಕಾರಣವಾಗಿವೆ.

ಇದೇ ರೀತಿ ಜಲ ಮತ್ತು ವಾಯು ಕೂಡಾ ಮಲಿನವಾಗುತ್ತಿವೆ. ನದಿ, ಹಳ್ಳ, ತೋಡುಗಳಿಗೆ ತ್ಯಾಜ್ಯಗಳನ್ನು ಎಸೆಯುವುದರಿಂದಲೂ ವಾಹನ, ಪ್ರಾಣಿಗಳನ್ನು ತೊಳೆಯುವುದರಿಂದಲೂ ಇಂದು ಜಲದ ಮೂಲಗಳು ಮಲಿನವಾಗುತ್ತಿವೆ. ನದಿ ದಡದಲ್ಲಿರುವ ಕಾರ್ಖಾನೆಗಳು ಹರಿದು ಬಿಡುವ ಕಲ್ಮಶ ಯುಕ್ತ ನೀರು ನದಿಗಳನ್ನು ಕಲುಷಿತಗೊಳಿಸುತ್ತಿವೆ. ಕೃಷಿಗೆ ಸಿಂಪಡಿಸುವ ಕೀಟನಾಶಕಗಳು ಕೀಟಗಳನ್ನು ಕೊಲ್ಲುವುದಲ್ಲದೆ ಕೀಟಗಳನ್ನು ತಿಂದು ಜೀವಿಸುವ ಪ್ರಾಣಿಗಳೂ ಸಾಯುತ್ತಿವೆ. ಆಗಸದಿಂದ ಹೆಲಿಕಾಪ್ಟರ್‌ಗಳ ಮೂಲಕ ಸಿಂಪಡಿಸುವ ರಾಸಾಯನಿಕಗಳು ಜೀವ ಸಂಕುಲಕ್ಕೆ ಅತ್ಯಂತ ಮಾರಕವಾಗಿವೆ.

ಉದಾ: ಗೇರು ತೋಟಕ್ಕೆ ಸಿಂಪಡಿಸುತ್ತಿರುವ ಎಂಡೋಸಲ್ಫಾನ್. ಇದರಿಂದಾಗಿ ನೆಲ ಜಲ ಮಾತ್ರವಲ್ಲದೇ ವಾಯು ಮಂಡಲವೂ ವಿಷಯುಕ್ತವಾಗುತ್ತದೆ. ವಾಹನಗಳು ಕಾರ್ಖಾನೆಗಳು ಉಗುಳುವ ಹೊಗೆ ವಾಯುವನ್ನು ಮಲಿನಗೊಳಿಸುತ್ತವೆ. ಈ ಎಲ್ಲಾ ಮಾಲಿನ್ಯಗಳಿಂದ ಪರಿಸರದಲ್ಲಿರುವ ಜೀವ ಸಂಕುಲಗಳಲ್ಲಿ ಕೆಲವು ಕಣ್ಮರೆಯಾಗುತ್ತಿವೆ. ಉದಾ: ಕೆಲವು ಜಾತಿಯ ಚಿಟ್ಟೆಗಳು, ಹಕ್ಕಿಗಳು 'ಕೊಡಲಿಯ ಕಾವು ಕುಲಕ್ಕೆ ಮೃತ್ಯು' ಎಂಬಂತೆ ನಮ್ಮ ಪರಿಸರ ಇದೇ ರೀತಿ ಮಲಿನವಾಗುತ್ತಾ ಹೋದರೆ ಮುಂದೊಂದು ದಿನ ಮನುಕುಲವೇ ನಾಶವಾಗುವುದು. ಆದುದರಿಂದ ಇದರ ಸಂರಕ್ಷಣೆಯ ಗುರುತರ ಜವಾಬ್ದಾರಿಯೂ ನಮ್ಮ ಮೇಲಿದೆ. ಹಾಗಾಗಿ ನಮ್ಮ ಪರಿಸರದ ಶುಚಿತ್ವ ನಮ್ಮಿಂದಲೇ ಆಗಬೇಕು. ಮೊದಲು ಮನೆಯಿಂದ ಬಳಿಕ ಶಾಲೆಯಿಂದ ಶುಚೀಕರಣ ಯಜ್ಞವು ಆರಂಭವಾಗಬೇಕು. ಬಾಲ್ಯದಿಂದಲೇ ಮಕ್ಕಳಲ್ಲಿ ಶುಚೀಕರಣದ ಮನೋಭಾವ ಬೆಳೆದು ಬಂದರೆ ನಗರೀಕರಣದಿಂದ ಉಂಟಾಗುವ ಪರಿಸರ ಮಾಲಿನ್ಯದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯ. ಇದಕ್ಕಾಗಿ ಚಿಕ್ಕ ಪುಟ್ಟ ಕೆಲಸಗಳಾದ ಗುಡಿಸುವುದು, ಕಸ ಹೆಕ್ಕುವುದು, ಕಸಗಳನ್ನು ಮೂಲೆಯಲ್ಲಿರುವ ಬುಟ್ಟಿಗೆ ಹಾಕುವುದು, ಕಕ್ಕುಸುಗಳನ್ನು ಉಪಯೋಗಿಸಿದ ನಂತರ ಶುಚಿಗೊಳಿಸುವುದು, ತಮ್ಮ ಬಟ್ಟೆ, ತಟ್ಟೆಗಳನ್ನು ತಾವೇ ತೊಳೆಯುವುದು ಇತ್ಯಾದಿ ಶುಚೀಕರಣ ಕಾರ್ಯಗಳಲ್ಲಿ ಮಕ್ಕಳು ತೊಡಗಬೇಕು. ಶುಚೀಕರಣದ ಬಗ್ಗೆ ಸಮಾಜದಲ್ಲಿ ಜಾಗೃತಿ ಮೂಡಿಸುವುದಕ್ಕಾಗಿ ವಿಚಾರ ಸಂಕಿರಣಗಳನ್ನು ನಡೆಸುವುದು, ಕರ ಪತ್ರ ಹಂಚುವುದು, ಭಿತ್ತಿ ಪತ್ರಗಳನ್ನು ತಯಾರಿಸಿ ಸಾರ್ವಜನಿಕ ಸ್ಥಳಗಳಲ್ಲಿ ಅಂಟಿಸುವುದು, ತಿಳುವಳಿಕಾ ಶಿಬಿರಗಳನ್ನು ನಡೆಸುವುದು ಇವೇ ಮೊದಲಾದ ಚಟುವಟಿಕೆಗಳನ್ನು ವಿದ್ಯಾರ್ಥಿಗಳು ಅಧ್ಯಾಪಕರ, ಊರ ಹಿರಿಯರ ಮತ್ತು ವೈದ್ಯಾಧಿಕಾರಿಗಳ ಸಹಕಾರದೊಂದಿಗೆ ನಡೆಸುವುದು.

ಪರಿಸರವನ್ನು ಶುಚಿಗೊಳಿಸುವುದರಲ್ಲಿ ಪ್ರಾಣಿ ಮತ್ತು ಸಸ್ಯಗಳ ಪಾತ್ರ ಪ್ರಧಾನವಾದುದಾಗಿದೆ. ಸಸ್ಯಗಳು ವಾತಾವರಣದಲ್ಲಿರುವ ಅಂಗಾರಾಮ್ಲವನ್ನು ಹೀರಿ ತಮ್ಮ ಆಹಾರ ತಾವೇ ತಯಾರಿಸುತ್ತವೆ. ಆಗ ವಾತಾವರಣಕ್ಕೆ ಸಾಕಷ್ಟು ಪ್ರಮಾಣದಲ್ಲಿ ಆಮ್ಲಜನಕವನ್ನು ಬಿಡುಗಡೆಗೊಳಿಸುತ್ತವೆ. ಕಾಗೆ, ಹದ್ದು, ಕತ್ತೆ ಕಿರುಬ ಮೊದಲಾದ ಪ್ರಾಣಿ ಪಕ್ಷಿಗಳು ಪರಿಸರದಲ್ಲಿ ಕೊಳೆಯುವ ವಸ್ತುಗಳನ್ನು ತಿಂದು ಶುಚಿಗೊಳಿಸುತ್ತವೆ. ಕಾಡುಗಳನ್ನು ಬೆಳೆಸಿ ಪ್ರಾಣಿಗಳನ್ನು ಸಂರಕ್ಷಿಸುವುದರಿಂದ ಪರಿಸರವು ಶುಚಿಯಾಗಬಹುದು. 'ಮರ ಒಂದು ವರ'. ಆದುದರಿಂದ ಗಿಡ ಮರಗಳನ್ನು ಮನೆ ಪರಿಸರದಲ್ಲೂ ಶಾಲಾ ಪರಿಸರದಲ್ಲೂ ಹೆಚ್ಚು ಬೆಳೆಸಬೇಕು. ಇದರ ನೇತೃತ್ವವನ್ನು ವಿದ್ಯಾರ್ಥಿಗಳು ವಹಿಸಬೇಕು. ಇಂದಿನ ಮಕ್ಕಳೇ ಮುಂದಿನ ಜನಾಂಗವಾದುದರಿಂದ ವಿದ್ಯಾರ್ಥಿಗಳು ಕಲಿಕೆಯ ಭಾಗವಾಗಿ ಪರಿಸರ ಶುಚಿತ್ವದಲ್ಲಿ ನೇರವಾಗಿ ಪಾಲುಗೊಂಡಾಗ ಮುಂದಿನ ತಲೆಮಾರನ್ನು ಶುಚಿತ್ವದ ಮತ್ತು ಸ್ವಸ್ಥ ಸಮಾಜವಾಗಿ ರೂಪಿಸಲು ಸಾಧ್ಯವಾಗಬಹುದು.

## ❑ ಪದ ಬಳಸಿರಿ

ಮಕ್ಕಳು ಇದನ್ನು ಮನೆ ಕೆಲಸವಾಗಿ ಮಾಡಲಿ. ಇಂತಹ ಚಟುವಟಿಕೆಗಳು ವಿವರವಾಗಿರುವ ವಿಷಯವನ್ನು ಸಂಕ್ಷಿಪ್ತಗೊಳಿಸಲು ಸಹಕಾರಿಯಾಗುತ್ತವೆ.

## ❑ ಪದ ಸೂರ್ಯ

ಮಗುವಿನಲ್ಲಿ ಆಶಯ ಭೂಪಟವನ್ನು ನಿರ್ಮಿಸಲು ಪದ ಸೂರ್ಯವು ಸಹಕಾರಿಯಾಗಿದೆ. ಯಾವುದಾದರೂ ವಿಷಯದ ಬಗ್ಗೆ ಕತೆ, ಕವಿತೆ, ವಿವರಣೆ, ಘಟನೆ, ಲೇಖನ, ಟಿಪ್ಪಣಿ ಇತ್ಯಾದಿಗಳನ್ನು ರಚಿಸುವ ಮೊದಲು ಅದರಲ್ಲಿ ಯಾವ ಯಾವ ವಿಚಾರಗಳು ಒಳಗೊಳ್ಳಬೇಕು ಎಂಬುದನ್ನು ಸೂಚಿಸುವುದೇ ಆಶಯ ಭೂಪಟವಾಗಿದೆ.

ಮನೋ ಭೂಪಟದ ಪ್ರಕಟಿತ ರೂಪವೇ ಆಶಯ ಭೂಪಟವಾಗಿದೆ.




ಇಲ್ಲಿ ಗಾಳಿಯ ವಿವಿಧ ರೂಪಗಳನ್ನು ಬರೆದು ವಾಕ್ಯಗಳನ್ನು ರೂಪಿಸುವುದಾಗಿದೆ.

**ಮನೋಭೂಪಟ ಎಂದರೇನು?**

ಯಾವುದೋ ಒಂದು ವಸ್ತುವನ್ನು ನೋಡಿದಾಗ ಅಥವಾ ಘಟನೆಯನ್ನು ಕೇಳಿದಾಗ ಮಗುವಿನ ಮನಸ್ಸಿನಲ್ಲಿ ಮೂಡುವ ವಿಚಾರಗಳೇ ಮನೋಭೂಪಟವಾಗಿದೆ. ಉದಾ: 'ಚಾ' ಎಂದ ಕೂಡಲೇ ಮಗುವಿನ ಮನಸ್ಸಿನಲ್ಲಿ ಚಾ ಮಾಡುವ ವಿಧಾನ, ಯಾ ಬೆಳಗ್ಗಿನ ಚಹಾಕ್ಕಾಗಿ ಜಗಳಾಡಿದ ವಿಚಾರ ಯಾ ಹಿಂದಿನ ದಿನ ಕುಡಿದ ಚಹಾಕ್ಕೆ ಸಕ್ಕರೆ ಬದಲು ಉಪ್ಪು ಹಾಕಿ ಕುಡಿದದ್ದು ಇತ್ಯಾದಿ ವಿಚಾರಗಳು ಮೂಡಬಹುದು. ಮನೋಭೂಪಟವು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುವುದು.

## ❑ ಒಂದೇ ವಾಕ್ಯವಾಗಿ ಬರೆಯಿರಿ

ಇಲ್ಲಿ ಎರಡು ವಾಕ್ಯಗಳನ್ನು ಒಂದು ವಾಕ್ಯವಾಗಿ ಬದಲಾಯಿಸುವಾಗ 'ರೆ' ಎಂಬ ಅಕ್ಷರ ಸೇರುತ್ತದೆ. ಇದನ್ನು 'ಪಕ್ಷಾರ್ಥ' ಎನ್ನುವರು. ಇಲ್ಲಿ ಮೊದಲ ವಾಕ್ಯವು ಶರತ್ತನ್ನು ವಿಧಿಸುತ್ತದೆ. ಅನಂತರದ ವಾಕ್ಯವು ಶರತ್ತು ಯಾಕೆ ಎಂಬುದನ್ನು ತಿಳಿಸುತ್ತದೆ.

ಮಕ್ಕಳಲ್ಲಿ ಭಾಷಾ ಬೆಳವಣಿಗೆಯಾದ ಹಾಗೆ ಸಣ್ಣ ವಾಕ್ಯಗಳ ಬದಲು ಸಂಯುಕ್ತ ವಾಕ್ಯಗಳಲ್ಲಿ ಬರೆಯುವ ಸಾಮರ್ಥ್ಯವನ್ನು ಬೆಳೆಸಬೇಕಾಗಿದೆ. ಅದಕ್ಕಾಗಿ ಇಂತಹ ಚಟುವಟಿಕೆಗಳನ್ನು ಮಕ್ಕಳಿಗೆ ಸಾಕಷ್ಟು ನೀಡುವುದು ಉತ್ತಮ.

**ಪೂರಕ ಓದಿಗೆ**

### ಪೆಸಿಫಿಕ್ ಸಾಗರದಲ್ಲಿ ತೇಲುವ ಪ್ಲಾಸ್ಟಿಕ್ ಖಂಡ

ಐವತ್ತು ವರ್ಷಗಳಲ್ಲಿ ಜಗತ್ತು ಅದೆಷ್ಟು ಬದಲಾವಣೆಗಳನ್ನು ಕಂಡಿದೆ! ಗ್ರಾಮೀಣ ಪ್ರದೇಶಗಳಲ್ಲಿ ಮಣ್ಣಿನ ಗಡಿಗೆಗಳ ಜಾಗದಲ್ಲಿ ತಾಮ್ರ, ಹಿತ್ತಾಳೆ ಕೊಡಗಳು ಬಂದವು. ಅನಂತರ ಆ ಜಾಗದಲ್ಲಿ ಅಲ್ಯೂಮಿನಿಯಮ್ ಪಾತ್ರೆಗಳು ರಾರಜಿಸಿದವು. ಅವೂ ಶಾಶ್ವತವಾಗಿ ಉಳಿಯಲಿಲ್ಲ. ಸ್ಟೀಲ್ ಪಾತ್ರೆಗಳು ಜಗತ್ತನ್ನು ಪ್ರವೇಶಿಸಿ ಮನೆಮನಗಳನ್ನು, ಹೊರಜಗತ್ತನ್ನು ಆಳಲು ತೊಡಗಿ ಇನ್ನೂ ಅದರ ಬಳಕೆ ಹಿಂದೆ ಸರಿಯದೆ ನಾಗಾಲೋಟದಲ್ಲಿ ಓಡುತ್ತಿರುವಾಗಲೇ ಬಣ್ಣ ಬಣ್ಣದ ಪ್ಲಾಸ್ಟಿಕ್ ಬಿಂದಿಗೆಗಳು ಬಂದವು. ಬಾವಿಯಲ್ಲಿ ಅವುಗಳನ್ನು ಮುಳುಗಿಸಲು ಅದೆಷ್ಟು ಬಾರಿ ಹಗ್ಗವನ್ನು ಮೇಲೆ ಕೆಳಗೆ ಎಳೆಯಬೇಕಾಗಿತ್ತೋ ಅದೇ ಒಂದು ಕಲೆಯಾಗಿತ್ತು. ಸುಲಭದ ಬೆಲೆಯಲ್ಲಿ ಬಡವರಿಗೂ ನಿಲುಕಿದ್ದರಿಂದ ಬಹುಬೇಗ ಪ್ಲಾಸ್ಟಿಕ್ ಪ್ರಪಂಚ ಅಧಿಪತ್ಯ

ಸ್ಥಾಪಿಸಿತು. ಇದೊಂದು ಸದ್ದಿಲ್ಲದ ಕ್ರಾಂತಿ ಪ್ಲಾಸ್ಟಿಕ್ ವಿವಿಧ ರೂಪ ತಳೆಯಿತು. ನೀರಿನ ಬಾಟಲಿಯಿಂದ ತೊಡಗಿ ಅಡುಗೆ ಮನೆಯ ಸಾಮಾನು ತುಂಬುವವರೆಗೆ. ಹೊಸದರದಲ್ಲಿ ಎಲ್ಲವೂ ಚೆನ್ನ, ಆದರೆ ಕಾಲ ಬದಲಾದ ಹಾಗೆ, ಬಳಕೆ ಹೆಚ್ಚಿದ ಹಾಗೆ ಪ್ಲಾಸ್ಟಿಕ್ ವಿಶ್ವರೂಪಿಯಾಯಿತು. ಈಗ ಅದು ಮಾಲಿನ್ಯದ ಅಪಕೀರ್ತಿಯ ಶಿಖರ ಏರಿದೆ. ಸಸ್ಯತೋಟಗಳಲ್ಲಿ ಸಣ್ಣ ಸಸಿಗಳನ್ನು ಬೆಳೆಸುವುದಕ್ಕೂ ಪ್ಲಾಸ್ಟಿಕ್ ಚೀಲವೇ ಬೇಕು. ನಮ್ಮ ಮನೆಗಳಿಗೆ ಡೈರಿ ಹಾಲು ಬರುವುದು ಪ್ಲಾಸ್ಟಿಕ್ ಪೊಟ್ಟಣದಲ್ಲಿ ಎಣ್ಣೆ ಕೂಡ ಅಂಥ ಪೊಟ್ಟಣದಲ್ಲೇ. ಹಲ್ಲುಜ್ಜುವ ಬ್ರಷ್‌ನಿಂದ ಹಿಡಿದು ತೈಲ ತುಂಬುವ ಬ್ಯಾರೆಲ್‌ಗಳವರೆಗೆ ಪ್ಲಾಸ್ಟಿಕ್ ಸರ್ವವ್ಯಾಪಿ.

ಬಳಸಿದ ನಂತರ ಪ್ಲಾಸ್ಟಿಕ್ ಒಂದು ತ್ಯಾಜ್ಯ ಪದಾರ್ಥ. ಭಯಾನಕ ಅಂಶವೆಂದರೆ ಅದು ಸಂಪೂರ್ಣವಾಗಿ ಜೈವಿಕವಾಗಿ ವಿಘಟನೆಯಾಗುವುದೇ ಇಲ್ಲ. ಕೊಳೆಯಲು ಅಂದರೆ ಸಣ್ಣ ಸಣ್ಣ ಚೂರುಗಳಾಗಲು 500 ರಿಂದ 1000 ವರ್ಷಗಳು ಬೇಕು. ಎಷ್ಟು ತಲೆಮಾರು ಅದೇ ಚೂರನ್ನು ನೋಡಬೇಕೋ ನೀವೇ ಲೆಕ್ಕಹಾಕಬಹುದು. ಪೆಸಿಫಿಕ್ ಸಾಗರದಲ್ಲೊಂದು ಮಹಾ ಖಂಡವೇ ತೇಲುತ್ತಿದೆ ಎಂದರೆ ಅದು ಸೋಜಿಗದ ಸಂಗತಿಯಲ್ಲ. ಯಾವ ಸಾಗರದಲ್ಲೂ ಗಟ್ಟಿಯಾದ ದ್ವೀಪಕೂಡ ತೇಲುವುದಿಲ್ಲ. ಹಾಗಿದ್ದಲ್ಲಿ, ಖಂಡ ಹೇಗೆ ತೇಲೀತು? ಪರಿಕಲ್ಪನೆಯಲ್ಲಿ ಎಲ್ಲಾದರೂ ದೋಷವಿದೆಯೇ ಎಂಬ ಅನುಮಾನ ಬರಬಹುದು. ಅದು ಪ್ಲಾಸ್ಟಿಕ್ ತ್ಯಾಜ್ಯದ ರಾಶಿಯಿಂದಾದ ಖಂಡ. ಕ್ಯಾಲಿಫೋರ್ನಿಯ ತೀರದಿಂದ ಆಚೆಗೆ 500 ನಾಟಿಕಲ್ ಮೈಲು ದೂರದ ಸಾಗರದಲ್ಲಿ ಉತ್ತರ ಭಾಗದ ಪೆಸಿಫಿಕ್‌ನಲ್ಲಿ ಹವಾಯಿ ದ್ವೀಪವನ್ನೂ ಹಿಂದಿಕ್ಕಿ ಹೆಚ್ಚುಕಡಿಮೆ ಜಪಾನ್‌ವರೆಗೂ ತೇಲುತ್ತಿದೆ. ಹಾಗಾದರೆ ಖಂಡ ಎಂದದ್ದು ಏಕೆ? ಏಕೆಂದರೆ ಅದರ ವಿಸ್ತೀರ್ಣ ಹೆಚ್ಚು ಕಡಿಮೆ ಅಮೆರಿಕ ಸಂಯುಕ್ತ ಸಂಸ್ಥಾನದಷ್ಟು. ಅಂದಾಜು 15,000,000 ಚದರ ಕಿಲೋಮೀಟರ್. ಪೆಸಿಫಿಕ್ ಸಾಗರದ ಸುಮಾರು ಶೇ.8 ಭಾಗದ ವ್ಯಾಪ್ತಿ. ಇದರ ಒಟ್ಟಾರೆ ತೂಕ ಏಳು ಮಿಲಿಯನ್ ಟನ್ ಎಂದು ಒಂದು ಅಂದಾಜು. ಇದು ಸಾಗರದ ಕೆಳಕ್ಕೆ 30 ಮೀಟರಿನಷ್ಟು ಇಳಿದಿದೆ. ಬಂದುದೆಲ್ಲಿಂದ? ಮುಕ್ಕಾಲು ಪಾಲು ತೀರ ಪ್ರದೇಶದಲ್ಲಿರುವ ನಗರಗಳಿಂದ ಬಿಸುಟ ಬಾಟಲಿಗಳು. ಪ್ಲಾಸ್ಟಿಕ್ ಚೀಲಗಳು, ಫುಟ್ಬಾಲ್, ನೈಲಾನ್ ಹಗ್ಗ, ಪ್ಲಾಸ್ಟಿಕ್ ಡಬ್ಬಿ ಇವುಗಳಿಂದ. 12 ವರ್ಷತೇಲಿ – ಮುಳುಗಿ–ತೇಲಿ, ಪ್ರವಾಹಗಳು ಹೊತ್ತು ಅಂತಿಮವಾಗಿ ಹೊರೆ ಇಳಿಸಿಕೊಳ್ಳುವುದು ಪೆಸಿಫಿಕ್ ಸಾಗರದ ಈ ಸುಳಿಗೆ ತಳ್ಳಿ ಇದರಲ್ಲಿ ಸಾಗರ ಯಾನಿಗಳ ಕೊಡುಗೆಯೂ ಇದೆ. ಆದರೆ ಈಗ ಹಡಗುಗಳು ಆ ಜಾಗಕ್ಕೆ ಹೋಗಲು ಹಿಂಜರಿಯುತ್ತವೆ. ಗಾಳಿಯೂ ಅಲ್ಲ. ಅದು ಗಿರುಗುಟ್ಟಿ ಚಕ್ರವಾಗಿ ಎಲ್ಲವನ್ನೂ ತಿರುಗಿಸುತ್ತಲೇ ಇರುತ್ತದೆ. ಇದನ್ನೇ ಪೆಸಿಫಿಕ್ ಸಾಗರದ ಸುಳಿಪ್ರವಾಹ ಎನ್ನುತ್ತಾರೆ. ಮೀನುಗಾರರೂ ಅತ್ತ ಸುಳಿಯುವುದಿಲ್ಲ ಏಕೆಂದರೆ ಮೀನುಗಳಿಗೆ ಬೇಕಾದ ಪೋಷಕಾಂಶ ಅಲ್ಲಿ ದೊರೆಯುವುದಿಲ್ಲ. ವಿಚಿತ್ರವೆಂದರೆ ಉಪಗ್ರಹಗಳು ಈ ಪ್ಲಾಸ್ಟಿಕ್ ತಂಡದ ವ್ಯಾಪ್ತಿಯನ್ನು ತಿಳಿಸುವ ಸಾಮರ್ಥ್ಯ ಹೊಂದಿಲ್ಲ. ಮೇಲಿನಿಂದ ನೋಡಿದಾಗ ನೀರಿನಂತೆ ಪ್ಲಾಸ್ಟಿಕ್ ಕೂಡ ಪಾರದರ್ಶಕ. ದುರಂತವೆಂದರೆ ಈ ಪ್ಲಾಸ್ಟಿಕ್ ರಾಶಿಯನ್ನು ಆಹಾರವೆಂದು ಭಾವಿಸಿ ಹವಾಯಿ ದ್ವೀಪದ ಹಸಿರು ಕಡಲ ಆಮೆಗಳು ದೌಡಾಯಿಸಿ ತಿಂದು ಗೊಟಕ್ ಎನ್ನುತ್ತಿವೆ. ಕಡಲ ಹಕ್ಕಿಗಳಿಗೂ ತಬ್ಬಿಬ್ಬಾಗಿ ತಿಂದು ಅವೂ ವಿಲಿವಿಲಿ ಒದ್ದಾಡಿ ಸಾಯುತ್ತಿವೆ. ಸೀಲ್ ಪ್ರಾಣಿಗಳು ಅತ್ತ ನುಗ್ಗಿ ಬಂದು ನೈಲಾನ್‌ದಾರಗಳಿಗೆ ಬಲಿಯಾಗಿ ಉಸಿರುಕಟ್ಟಿ ಸಾಯುತ್ತಿದೆ. ಇದು ಪ್ಲಾಸ್ಟಿಕ್ ತ್ಯಾಜ್ಯ ಸೃಷ್ಟಿಸಿರುವ ಒಂದು ಭಯಾನಕ ಅಂಶವಾದರೆ, ಇದಕ್ಕಿಂತಲೂ ಘೋರವಾದ ಇನ್ನೊಂದು ಮುಖ ಇದಕ್ಕಿದೆ.

ಸಾಗರದ ನೀರಿನಲ್ಲಿ ವಿಲೀನವಾಗದೆ ಇರುವ ಡಿ.ಡಿ.ಟಿ., ಪಿ.ಸಿ.ಬಿ. (ಪಾಲಿಕ್ಲೋರಿನೇಟೆಡ್ ಬೈಫಿನೈಲ್) ಫಿನಾಲ್ – ಇಂಥ ವಿಷಕಾರಿ ವಸ್ತುಗಳನ್ನು ಪ್ಲಾಸ್ಟಿಕ್ ಹಿಡಿದಿಡಬಲ್ಲದು. ಪ್ಲಾಸ್ಟಿಕ್ ಜೊತೆಗೆ ಇವು ಸಾಗರ ಜೀವಿಗಳ ಹೊಟ್ಟೆ ಸೇರುತ್ತಿವೆ. ವಿಸ್ವಸಂಸ್ಥೆಯ ಪರಿಸರ ಯೋಜನೆಯ ಅಂಗ ಸಂಸ್ಥೆ ಭಯಾನಕ ಅಂಶವೊಂದನ್ನು ಮುಂದಿಟ್ಟಿದೆ. ಸಾಗರದಲ್ಲಿ ಬಿಸುಟುವ ಪ್ಲಾಸ್ಟಿಕ್ ಪದಾರ್ಥಗಳಿಂದ ಪ್ರತಿವರ್ಷ ಹತ್ತು ಲಕ್ಷ ಸಾಗರ ಪಕ್ಷಿಗಳು ಸಾವಿಗೀಡಾಗುತ್ತಿವೆ. ಒಂದು ಲಕ್ಷ ಸಾಗರ ಸ್ತನಿಗಳ ಬದುಕಿಗೆ ಇದು ಮಾರಕವಾಗಿದೆ, ಸತ್ತ ಪಕ್ಷಿ ಪ್ರಾಣಿಗಳ ಹೊಟ್ಟೆ ಬಗೆದು ನೋಡಿದಾಗ ಅದರಲ್ಲಿ ಕಂಡದ್ದು ಸಿರಿಂಜ್, ಸಿಗರೇಟು ಲೈಟರ್, ಹಲ್ಲುಜ್ಜುವ ಬ್ರಷ್ ಇಂಥ ನಮ್ಮ ಕೊಡುಗೆಗಳು. ಎರಡು ಚದರ ಕಿಲೋಮೀಟರ್ ವಿಸ್ತೀರ್ಣದ ಸಾಗರದಲ್ಲಿ 46,000 ತೇಲುವ ಪ್ಲಾಸ್ಟಿಕ್ ಚೂರುಗಳನ್ನು ಪರಿಸರ ಪ್ರಿಯರು ಸಂಗ್ರಹಿಸಿ ಹೌಹಾರಿದ್ದಾರೆ.

ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಸ್ವಸಂಸ್ಥೆಯ ಇನ್ನೊಂದು ಅಂಗಸಂಸ್ಥೆ 'ಇಂಟರ್ನ್ಯಾಷನಲ್ ಮ್ಯಾರಿಟೈಮ್ ಆರ್ಗನೈಸೇಷನ್' 1958ರಲ್ಲೇ ಅಸ್ತಿತ್ವಕ್ಕೆ ಬಂತು. ಸಾಗರ ಮಾಲಿನ್ಯ ತಡೆಯಲು ಭಾರತವೂ ಸೇರಿದಂತೆ 170 ದೇಶಗಳು ಈ ಸಂಸ್ಥೆ ರೂಪಿಸಿರುವ ಕಟ್ಟಳೆಗೆ ಬದ್ಧವಾಗಿವೆ. ಆದರೆ ಸ್ವಯಂ ನಿಯಂತ್ರಣ ಹಾಕಿಕೊಳ್ಳಲು ಯಾವ ದೇಶವೂ ಮುಂದೆ ಬಂದಿಲ್ಲ. ಇದರ ಪರಿಣಾಮವಾಗಿ ನಾವೀಗ ನೋಡುತ್ತಿರುವುದು ಪೆಸಿಫಿಕ್ ಸಾಗರದಲ್ಲಿ ತೇಲುತ್ತಿರುವ ಪ್ಲಾಸ್ಟಿಕ್ ಖಂಡ. ಯಾವ ದೇಶ ಎಷ್ಟು ತ್ಯಾಜ್ಯವನ್ನು ಸಾಗರಕ್ಕೆ ಸುರಿಯುತ್ತಿದೆ ಎಂಬುದನ್ನು ಲೆಕ್ಕ ಇಟ್ಟವರಿಲ್ಲ. ಅಮೆಜಾನ್‌ನಿಂದ ಟೈಗ್ರಿಸ್ ನದಿಯವರೆಗೆ ಎಣಿಸುತ್ತ ಹೋದರೆ ಭೂಖಂಡದಲ್ಲಿ 2000 ಕಿಲೋ ಮೀಟರ್ ಉದ್ದವಿರುವ 51 ಮಹಾನದಿಗಳಿವೆ. 1000 ಕಿಲೋ ಮೀಟರಿಗೂ ಉದ್ದವಿರುವ 176 ನದಿಗಳಿವೆ. ಇಲ್ಲಿಂದ ಎಷ್ಟು ತ್ಯಾಜ್ಯ ಸಾಗರದ ಮಡಿಲಿಗೆ ಸೇರುತ್ತಿದೆಯೆಂದು ಇದುವರೆಗೂ ಅಂದಾಜಿಲ್ಲ. ಇನ್ನೂ ಒಂದು ಸಮಸ್ಯೆ ಎಂದರೆ ಸುತ್ತುತ್ತಿರುವ ಪ್ಲಾಸ್ಟಿಕ್ ಖಂಡದ ಈ ಭಾಗ ಯಾವೊಂದು ದೇಶಕ್ಕೂ ಸೇರಿಲ್ಲ. ಆದರೆ ಎಲ್ಲ ದೇಶಕ್ಕೂ ಸೇರಿದೆ. ಹೀಗಾಗಿಯೇ ಅಸಡ್ಡೆ, ಯಾವೊಂದು ದೇಶವೂ ಮುಂದೆ ಬರುತ್ತಿಲ್ಲ. ಅದು ಸುಲಭದ ಕೆಲಸವೂ ಅಲ್ಲ. ಒಂದು ವೇಳೆ ಹಠ ತೊಟ್ಟು ಸಾಗರವನ್ನು ಪ್ಲಾಸ್ಟಿಕ್ ಮುಕ್ತ ಮಾಡುತ್ತೇವೆಂದು ಹೊರಟರೂ ಸುಲಭವಾಗಿ ಅದು ಸಾಧ್ಯವಾಗದು. ಏಕೆಂದರೆ ಅದು ಇರುವ ಜಾಗ ಪೆಸಿಫಿಕ್ ಸಾಗರದ ಸುಳಿ ಪ್ರವಾಹಕ್ಕೆ ಹೆಸರುವಾಸಿ. ಇಂಥ ಸಂಕಟ ಸಮಯದಲ್ಲೂ 'ಸೀ ಎಜುಕೇಷನ್ ಅಸೋಸಿಯೇಷಿನ್' ಎಂಬ ಸಂಸ್ಥೆ 38 ಮಂದಿ ನಾವಿಕರು, ವಿಜ್ಞಾನಿಗಳು, ಪತ್ರಕರ್ತರನ್ನು ಈ ಹೊಲಸು ಅಧ್ಯಯನಕ್ಕೆಂದೇ ಕಳಿಸಿತ್ತು. 118 ಕಡೆ ಬಲೆ ಬೀಸಿದಾಗ ಸಿಕ್ಕಿದ್ದು ಮೀನಲ್ಲ, 70,000 ಪ್ಲಾಸ್ಟಿಕ್ ಚೂರುಗಳು. ಹೆಚ್ಚೂಕಡಿಮೆ ಅಮೇರಿಕ ಸಂಯುಕ್ತ ಸಂಸ್ಥಾನದಷ್ಟೇ ವಿಸ್ತೀರ್ಣವಿರುವ ಈ ಪ್ಲಾಸ್ಟಿಕ್ ಮಾಲಿನ್ಯವನ್ನು ಬಳಿಯಲು ಹೋದರೆ ಸಾವಿರಾರು ಸಾಗರ ಜೀವಿಗಳು ಸಾಯುತ್ತದೆ. ಸುತ್ತುತ್ತಿರುವ ಈ ಪ್ಲಾಸ್ಟಿಕ್ ರಾಶಿಯನ್ನು ಬಳಿದು ಗುಡ್ಡೆಹಾಕಿ ರಾಶಿಮಾಡಲೂ ಸಾಧ್ಯ ಎನ್ನೋಣ. ಅದನ್ನು ಸುಡಲು ಹೋದರೆ ಇನ್ನೊಂದು ರಾದ್ಧಾಂತವಾಗುತ್ತದೆ. ಅದರಿಂದ ಹೊರಹೊಮ್ಮುವ ಡಯಾಕ್ಸಿನ್ ಎಂಬ ಅನಿಲ ಕ್ಯಾನ್ಸರ್‌ಕಾರಕವೆಂದು ಸಾಬೀತಾಗಿದೆ. ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ಪರಿಸರ ತಜ್ಞರು ಎಚ್ಚರಿಸಿದ್ದಾರೆ: 2050ರ ವೇಳೆಗೆ ನಾವು 33 ಶತಕೋಟಿ ಟನ್ನು ಪ್ಲಾಸ್ಟಿಕ್ ಭಾರವನ್ನು ಧರೆಯ ಮೇಲೆ ಹಾಕುತ್ತಿದ್ದೇವೆ. ನಾವೇ ಸೃಷ್ಟಿಸಿದ ಪ್ಲಾಸ್ಟಿಕ್ ಭೂತ ಈಗ ನಮ್ಮನ್ನೇ ಬೆಂಬಿಡದೆ ಕಾಡುತ್ತಿದೆ.

– ಸಂಗ್ರಹ

# ನೀರಿನ ಋಣ

## ಚಟುವಟಿಕೆಗಳು

- ಕತೆ ಕೇಳಿರಿ.
- ಸಾಲು ಮರ ತಿಮ್ಮಕ್ಕನ ಸಾಧನೆಯ ಕತೆಯನ್ನು ಹೇಳುತ್ತಾ ಪ್ರವೇಶ ಮಾಡಬಹುದು

### ❑ ಸಾಮಾನ್ಯ ಚರ್ಚೆ

- ತಿಮ್ಮಕ್ಕನಿಗೆ 'ಸಾಲು ಮರ ತಿಮ್ಮಕ್ಕ' ಎಂಬ ಹೆಸರು ಬರಲು ಕಾರಣವೇನು?
- ಅವಳ ಕೆಲಸದ ಬಗ್ಗೆ ನಿಮ್ಮ ಅಭಿಪ್ರಾಯವೇನು?
- ನೀವು ಇಂತಹ ಕೆಲಸ ಮಾಡುತ್ತಿರುವಿರೋ?
- ಇಂದಿನ ಸಸಿಯು ನಾಳೆಯ ಹಸಿವನ್ನು ನೀಗಿಸಬಹುದಲ್ಲವೇ?

### ❑ ಓದುವಿಕೆ

ಮಕ್ಕಳು ವೈಯುಕ್ತಿಕವಾಗಿ ಮೌನದಿಂದ ಪಾಠಭಾಗವನ್ನು ಓದುವುದು. ಬಳಿಕ ಪದ ಹುಡುಕುವ ಆಟವನ್ನು ಆಡುವುದು. ಕೊನೆಗೆ ಅಧ್ಯಾಪಕರು ಪಾಠವನ್ನು ಹಾವ ಭಾವ ಧ್ವನಿ ಏರಿಳಿತದೊಂದಿಗೆ ಓದುವುದು.

### ❑ ಚರ್ಚಿಸಿರಿ

'ನಿನಗೆಲ್ಲೋ ತಲೆ ಕೆಟ್ಟಿದೆ ಈ ಕಾಡು ಮರಗಳಿಗೆಲ್ಲಾ ನೀರು ಹಾಕ್ತಾರ?' ಎಂಬ ರಂಗನ ಗೆಳೆಯರ ಪ್ರತಿಕ್ರಿಯೆಯ ಬಗ್ಗೆ ಮಕ್ಕಳ ಅಭಿಪ್ರಾಯವನ್ನು ಚರ್ಚೆ ಮೂಲಕ ಕ್ರೋಡೀಕರಿಸಬಹುದು.

### ❑ ಪದ ಹುಡುಕುವ ಆಟ

ಮಕ್ಕಳನ್ನು ಎರಡು ಅಥವಾ ಎರಡಕ್ಕಿಂತ ಹೆಚ್ಚು ಗುಂಪುಗಳಾಗಿ ಮಾಡುವುದು. ಒಂದು ಗುಂಪು ಒಂದು ಪದವನ್ನು ಹೇಳಿದಾಗ ಇನ್ನೊಂದು ಗುಂಪು ಆ ಪದವಿರುವ ವಾಕ್ಯವನ್ನು ನಿರ್ದಿಷ್ಟ ಸಮಯದೊಳಗೆ ಕಂಡು ಹಿಡಿದು ಗಟ್ಟಿಯಾಗಿ ಓದಬೇಕು. ಬಳಿಕ ಓದಿದ ಗುಂಪು ಮೂರನೇ ಗುಂಪಿಗೆ ಪದ ಹುಡುಕಲು ಹೇಳುವುದು. ಇದೇ ರೀತಿ ಮುಂದುವರಿಯುತ್ತದೆ.

### ❑ ಉತ್ತರಿಸಿರಿ

ಪಾಠವನ್ನು ಓದಿದ ಬಳಿಕ ಪಾಠ ಭಾಗದಲ್ಲಿ ನೀಡಿದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

### ❑ ಕಥೆ ಪೂರ್ತಿಗೊಳಿಸಿರಿ

ಮಕ್ಕಳು ವೈಯಕ್ತಿಕವಾಗಿ ಈ ಚಟುವಟಿಕೆಯನ್ನು ಮಾಡಲಿ. ಮಕ್ಕಳಿಗೆ ಕ್ಲಿಷ್ಟವಾಗುವ ಸಂದರ್ಭದಲ್ಲಿ ಅಧ್ಯಾಪಕರು ಸಹಾಯ ಮಾಡುವುದು. ತುಂಬಿಸಬೇಕಾದ ಪದಗಳನ್ನು ಈ ಕೆಳಗೆ ಅನುಕ್ರಮವಾಗಿ ಬರೆಯಲಾಗಿದೆ.

ಹೋಗಿದ್ದ, ದೊಡ್ಡದಾಗಿ, ತೋಟವೊಂದರಲ್ಲಿ, ಹಾದುಹೋಗಿ, ಮುತ್ತಿಕೊಂಡರು, ಮಾತನಾಡಿಸಿ, ಹಾಯಿಸಿದಲ್ಲೆಲ್ಲಾ, ತಿರುಗಾಡುತ್ತಿರುವ, ಮಾತುಗಳಿಂದ, ಹಿಂದೆ ಹಾಕುತ್ತಾ, ನೇತಾಡುತ್ತಿದ್ದು, ಆಶ್ಚರ್ಯದಿಂದ, ಸುರಿಯುತ್ತಿರುವ, ಪಾತ್ರೆಯಲ್ಲಿ , ಬೆಲೂನಿಗಾಗಿ, ಕಳಿಸಿಕೊಡ್ತೇನೆ, ಕಣ್ಣುತೆರೆದು, ಕನವರಿಸೋದು

## ❑ ಅಭಿನಯಿಸಿರಿ

ಪಾಠಭಾಗದಲ್ಲಿ ಬರುವ ಇಷ್ಟವಾದ ಸನ್ನಿವೇಶವೊಂದನ್ನು ಮಕ್ಕಳು ಆಯ್ದುಕೊಳ್ಳಲಿ. ಬಳಿಕ ಆ ಸನ್ನಿವೇಶವನ್ನು ಅಭಿನಯಿಸುವುದಕ್ಕೆ ಅಗತ್ಯವಾದ ಸಂಭಾಷಣೆ ಬರೆಯಲಿ. ಕೊನೆಗೆ ಗುಂಪಿನಲ್ಲಿ ಅಭಿನಯಿಸಲಿ.

ಅಭಿನಯ ಹೇಗಿರಬೇಕು?

- ಕಥೆಯ ಆಶಯವು ಮನದಟ್ಟಾಗುವ ರೀತಿಯಲ್ಲಿ ಸೂಕ್ತವಾದ ಸಂಭಾಷಣೆ ಇರಬೇಕು(4,3,2,1)
- ಪಾತ್ರಕ್ಕೆ ಯೋಗ್ಯವಾದ ಸಂಭಾಷಣೆ ಮತ್ತು ಅಭಿನಯವಿರಬೇಕು (4,3,2,1)
- ಸಂಭಾಷಣೆ ನಡೆಸುವಾಗ ಹಾವಭಾವದೊಂದಿಗೆ ಸ್ವರದಲ್ಲಿ ಏರಿಳಿತಗಳಿರಬೇಕು(4,3,2,1)
- ಪಾತ್ರಗಳೊಳಗೆ ಹೊಂದಾಣಿಕೆ ಇರಬೇಕು (4,3,2,1)

ಪ್ರತಿಯೊಂದು ಸೂಚಕಕ್ಕನುಸರಿಸಿ ಮಕ್ಕಳು ಅಂಕ ಹಾಕಲಿ ಅಂಕಗಳನ್ನು ಒಟ್ಟು ಮಾಡಿ ಗ್ರೇಡು ನೀಡಲಿ.

| | | |
|---|---|---|
| 13 ರಿಂದ 16 | – | 'ಎ' |
| 9 ರಿಂದ 12 | – | 'ಬಿ' |
| 5 ರಿಂದ 8 | – | 'ಸಿ' |
| 5 ಕ್ಕಿಂತ ಕೆಳಗೆ | – | 'ಡಿ' |

## ❑ ಸಂಭಾಷಣೆ ಹೀಗೂ ಇರಬಹುದಲ್ಲವೇ?

(ತರಗತಿ ಕೋಣೆ, ಮಕ್ಕಳೆಲ್ಲಾ ಎಸೆಂಬ್ಲಿ ಮುಗಿಸಿ ತರಗತಿ ಕೋಣೆಗೆ ಬಂದಿದ್ದಾರೆ. ಎಲ್ಲರ ಮುಖಗಳಲ್ಲೂ ಸಂತೋಷದ ಛಾಯೆ ಇದೆ.)

ಸಂಗಣ್ಣ : ಇನ್ನು ನೀರಿಗಾಗಿ ಪರದಾಡಬೇಕಾಗಿಲ್ಲ, ಅಲ್ಲವೇ ಗೀತಾ?

ಗೀತಾ : ಹೌದು ಕಣೋ, ನಾವು ಕೈ, ಬುತ್ತಿ ತೊಳೆಯಲು ಎಷ್ಟು ಕಷ್ಟ ಪಡುತ್ತಿದ್ದೆವು? ಈಗ ಸಾಕಷ್ಟು ನೀರು ಇದೆ.

ರಂಗಣ್ಣ : ನೀರು ಇದೆ ಎಂದು ಪೋಲು ಮಾಡಬಾರದು. ಮುಖ್ಯೋಪಾಧ್ಯಾಯರು ಹೇಳಿದ ಮಾತನ್ನು ಮರೆತಿರಾ?

ಸಂಗಣ್ಣ : ಅದು ನಮಗೆ ತಿಳಿದಿದೆ. ನೀವು ಹೇಳಿ ದೊಡ್ಡ ಜನ ಆಗುವುದು ಬೇಡ? (ಅಧ್ಯಾಪಕರ ಪ್ರವೇಶ, ಮಕ್ಕಳೆಲ್ಲರೂ ಎದ್ದು ನಿಲ್ಲುವರು)

ಮಕ್ಕಳೆಲ್ಲರೂ: ನಮಸ್ಕಾರ, ಸಾರ್

ಅಧ್ಯಾಪಕ : ಶುಭೋದಯ, ಕುಳಿತುಕೊಳ್ಳಿ, ಮುಖ್ಯೋಪಾಧ್ಯಾಯರು ಅಸೆಂಬ್ಲಿಯಲ್ಲಿ ಹೇಳಿದ ವಿಚಾರ ತಿಳಿಯಿತಲ್ಲವೇ.

ಮಕ್ಕಳು : ತಿಳಿಯಿತು ಸಾರ್

ವೀಣಾ : ಪಂಚಾಯತಿನವರು ಕೊಳವೆ ಬಾವಿ ತೆಗೆಸಿ ನಮಗೆ ತುಂಬ ಉಪಕಾರ ಮಾಡಿದರು.

ರಂಗಣ್ಣ : ಕೊಳವೆ ಬಾವಿಯಲ್ಲಿ ನೀರು ಸಿಕ್ಕಿದುದರಿಂದ ದೂರದಿಂದ ಬರುವ ನನ್ನಂತಹ ವಿದ್ಯಾರ್ಥಿಗಳಿಗೆ ಪ್ರಯೋಜನವಾಗಿದೆ. ನಾವು ಮನೆಯಿಂದ ಬಾಟ್ಲಿಯಲ್ಲಿ ನೀರು ತಂದರೆ ಶಾಲೆಗೆ ತಲುಪುವಾಗ ನೀರು ಖಾಲಿ. ಬಳಿಕ ಸಂಜೆ ಮನೆ ತಲುಪುವರೆಗೆ ನೀರಿಗಾಗಿ ಹಾಹಾಕಾರ.

ಅಧ್ಯಾಪಕ : ಹೌದು, ಇನ್ನು ನೀರಿನ ಸಮಸ್ಯೆಯಿಲ್ಲ.

ರಂಗಣ್ಣ : ಆದರೆ, ನೀರನ್ನು ಎಚ್ಚರದಿಂದ ಬಳಸಬೇಕು. ಮೊದಲಿನಂತೆ ಇನ್ನು

ಮುಂದೆಯೂ ಬಾಟ್ಲಿಗಳನ್ನು ತಂದು ನೀರು ತುಂಬಿಸಿಟ್ಟುಕೊಳ್ಳಬೇಕು. ಆಗ ನೀರಿನ ಮಿತವ್ಯಯವಾಗಬಹುದು.

ಅಧ್ಯಾಪಕ : ರಂಗಣ್ಣ ಹೇಳಿದ ಮಾತು ಅಕ್ಷರಶಃ ನಿಜ. ನೀರು ಅಮೂಲ್ಯವಾದುದು ಅದನ್ನು ಪೋಲು ಮಾಡಬಾರದು. ತಿಳಿಯಿತಾ ಮಕ್ಕಳೇ?

ಮಕ್ಕಳು : ಆಯಿತು ಸಾರ್, ನಾವೆಲ್ಲರೂ ಬಾಟ್ಲಿಗಳಲ್ಲಿ ನೀರನ್ನು ತುಂಬಿಸಿಡುತ್ತೇವೆ.

ಅಧ್ಯಾಪಕ : ನಿಮಗೆ ಎಷ್ಟು ಬೇಕೋ ಅಷ್ಟು ತುಂಬಿಸಿಟ್ಟರೆ ಸಾಕು. ಅನಗತ್ಯವಾಗಿ ಬಾಟ್ಲಿಗಳನ್ನು ತಂದು ನೀರು ತುಂಬಿಸಿ ಇಲ್ಲಿ ಸ್ನಾನ ಮಾಡಬೇಡಿ

(ಮಕ್ಕಳೆಲ್ಲರೂ ನಗುವರು)

ವೀಣಾ : ಹೌದು ಸಾರ್, ಆ ಕಿಟ್ಟು ಇದ್ದಾನಲ್ಲ. ಅವನು ಇಂದು ಬೆಳಗ್ಗೆ ಶಾಲೆಗೆ ಬಂದವನೇ ನಲ್ಲಿ ತಿರುಗಿಸಿ ಕೈ ಕಾಲು ತೊಳೆದು ತಲೆಗೂ ನೀರು ಹೊಯ್ಕೊಂಡ.

ಅಧ್ಯಾಪಕ : ಹೌದೇನೋ?...ಇನ್ನು ಮುಂದೆ ಹಾಗೆ ಮಾಡಬೇಡ.

ಕಿಟ್ಟು : ಇಲ್ಲಿ ದಾರಿಯಲ್ಲಿ ಬರುವಾಗ ಹಕ್ಕಿಯ ಹಿಕ್ಕೆ ತಲೆಗೆ ಬಿದ್ದಿತ್ತು. ಹಾಗಾಗಿ ತಲೆ ತೊಳೆದೆನು. ಇನ್ನು ಮುಂದೆ ನೀರು ಹಾಳು ಮಾಡುವುದಿಲ್ಲ.

ಅಧ್ಯಾಪಕ : ನೀರನ್ನು ಇಂತಹ ಅಗತ್ಯಕ್ಕೆ ಬಳಸಬೇಕೇ ಹೊರತು ಅನಗತ್ಯವಾಗಿ ಹಾಳು ಮಾಡಬಾರದು ಎಂಬುದು ನನ್ನ ಅಭಿಪ್ರಾಯ.

ಮಕ್ಕಳು : ಹಾಗೆಯೇ ಮಾಡುತ್ತೇವೆ.

**ಪೂರಕ ಓದಿಗಾಗಿ**

## ಅಮೃತಾದೇವಿ: ಹಸಿರುಹೊನ್ನು

'ಒಂದು ಮರ ಉಳಿಯುವುದಾದರೆ ನನ್ನ ತಲೆ ಉರುಳಿದರೂ ಚಿಂತಿಲ್ಲ' ಎಂದಳು ದೃಢವಾಗಿ ಅಮೃತಾದೇವಿ. ಇದು ನಡೆದದ್ದು ರಾಜಸ್ಥಾನದ ಖೇಜ್ರಿ ಹಳ್ಳಿಯಲ್ಲಿ. 1730ರ ಸೆಪ್ಟಂಬರದ ಒಂದು ದುರ್ದಿನ. ತಮ್ಮ ಹಳ್ಳಿಯ ಖೇಜ್ರಿ ಮರಗಳನ್ನು ಕಡಿಯಲು ಜೋಧಪುರದ ಮಹಾರಾಜ ಅಜಯಸಿಂಗನ ಆಳುಗಳು ಬಂದಿದ್ದಾರೆಂಬುದನ್ನು ಅರಿತ ಮೂವರು ಹೆಣ್ಣುಮಕ್ಕಳ ತಾಯಿ ಅಮೃತಾದೇವಿ ತಾವು ದೇವರೆಂದು ಆರಾಧಿಸುವ ಮರಗಳನ್ನು ಕಡಿಯಬಾರದೆಂದು ಬೇಡಿಕೊಂಡಳು. ತಮಗೆ ಹಣದ ರೂಪದಲ್ಲಿ ಲಂಚಕೊಟ್ಟರೆ ಮಾತ್ರ ಮರಗಳನ್ನು ಉಳಿಸುತ್ತೇವೆ ಎಂದು ಆಳುಗಳು ಹೇಳಿದಾಗ, ಹಾಗೆ ಮಾಡುವುದು ತಮ್ಮ ಧಾರ್ಮಿಕ ನಂಬಿಕೆಯ ಮೇಲಣ ಅವಮಾನ ಎಂದಳು ಆಕೆ. ಥಾರ್ ಮರುಭೂಮಿಯ ನಡುವಿರುವ ಬಿಷ್ಣೋಯ್ ಗ್ರಾಮದ ಹಸಿರನ್ನು ಉಳಿಸುವ ದೃಷ್ಟಿಯಿಂದ, 'ಒಂದು ಮರ ಉಳಿಯುವುದಾದರೆ ನನ್ನ ತಲೆ ಉರುಳಿದರೂ ಚಿಂತಿಲ್ಲ' ಎಂದಳು ಆಕೆ ಸಾವಿಗೆ ಹೆದರದೆ. ಮರ ಕಡಿಯಲೆಂದು ಬಂದವರು ಮರವನ್ನಪ್ಪಿದ ಆಕೆಯ ಕೊರಳನ್ನು ಕತ್ತರಿಸಿ ಮರ ಕಡಿಯಲು ಮುಂದಾದಾಗ, ಆಕೆಯ ಮೂವರು ಹೆಣ್ಣುಮಕ್ಕಳು ಮರಗಳನ್ನು ಅಪ್ಪಿಹಿಡಿದರು. ಅವರ ರುಂಡಗಳೂ ಉರುಳಿದವು. ಸುದ್ದಿ ಸುತ್ತಲ ಗ್ರಾಮಗಳಿಗೆ ಹಬ್ಬಿ ಮೂರಾರು ಬಿಷ್ಣೋಯ್‌ಗಳು ಬಂದು ಮರಗಳನ್ನು ಕಡಿಯುತ್ತಾ ಹೋದರು. 363 ಬಿಷ್ಣೋಯ್‌ಗಳು ಹುತಾತ್ಮರಾದರು. ಇಡೀ ಹಳ್ಳಿ ಘೋರ ಗೊಂದಲದ ಬೀಡಾಯಿತು. ಹೆದರಿದ ಆಳುಗಳು ಹಿಂದಿರುಗಿ ಹೋಗಿ ರಾಜನಿಗೆ ಸುದ್ದಿ ಮುಟ್ಟಿಸಿದರು. ದುಃಖಿತನಾದ ರಾಜ ಖೇಜ್ರಿಗೆ ತೆರಳಿ ಜನರ

ಕ್ಷಮೆ ಯಾಚಿಸಿದ. ಖೇಜ್ರಿಯಲ್ಲಿ ಮರಕಡಿಯಬಾರದು, ಬೇಟೆಯಾಡಬಾರದು, ಇದನ್ನು ಉಲ್ಲಂಘಿಸಿದವರನ್ನು ಶಿಕ್ಷಿಸಲಾಗುವುದು ಎಂದು ರಾಜ ಕೂಡಲೇ ರಾಜಾಜ್ಞೆ ಹೊರಡಿಸಿದ. 'ಪರಿಸರವನ್ನು ಉಳಿಸಿದರೆ ಮಾನವನು ಉಳಿಯುತ್ತಾನೆ ಮತ್ತು ಏಳಿಗೆ ಪಡೆಯುತ್ತಾನೆ' ಎಂದು ಸಾರಿದ 15ನೇ ಶತಮಾನದ ಗುರು ಜಂಬೇಶ್ವರ ಅವರಿಂದ ಬಿಷ್ಣೋಯ್‌ಗಳಿಗೆ ಪರಿಸರವನ್ನು ಪೂಜಿಸುವ ಹಿನ್ನೆಲೆ ಬಂದುದು.

ಖೇಜ್ರಿಯ ಮರಗಳನ್ನು ಉಳಿಸುವ ಚಳವಳಿಯು, ಉತ್ತರಖಂಡದ 1970ರ 'ಚಿಪ್ಕೊ' ಮತ್ತು ಉತ್ತರ ಕನ್ನಡದ 1983ರ 'ಅಪ್ಪಿಕೊ' ಮೊದಲಾದ ಪರಿಸರದ ಸಂರಕ್ಷಣೆ ಕುರಿತಾದ ಚಳವಳಿಗಳಿಗೆ ನಾಂದಿಯಾಯಿತು.

ಗಿಡವೊಂದರ ಎಲೆಯ ಕೆಳಭಾಗದಲ್ಲಿರುವ ಮಿಲಿಯಗಟ್ಟಲೆ ಚಲನೆಯಲ್ಲಿರುವ ತುಟಿಗಳು ಕಾರ್ಬನ್ ಡೈಆಕ್ಸೈಡನ್ನು ನುಂಗಿ, ಆಮ್ಲಜನಕವನ್ನು ಹೊರಬಿಡುವುದರಲ್ಲಿ ನಿರತವಾಗಿರುತ್ತವೆ. ಭೂಮಿಯ ಮೇಲೆ ನಿತ್ಯ ಸುಮಾರು 25 ಮಿಲಿಯ ಚದರ ಮೈಲುಗಳಷ್ಟು ವಿಸ್ತಾರದಲ್ಲಿ ಹಸಿರೆಲೆಗಳು ದ್ಯುತಿಸಂಶ್ಲೇಷಣೆಯ ಮೂಲಕ ಆಮ್ಲಜನಕ, ಆಹಾರ, ಪಾನೀಯ, ಮಾದಕದ್ರವ್ಯ, ಸುಗಂಧದ್ರವ್ಯ, ಔಷಧ ಮೊದಲಾದವುಗಳನ್ನು ತಯಾರಿಸುವುದರಲ್ಲಿ ನಿರತವಾಗಿರುತ್ತವೆ. ಸಂಸ್ಕೃತದ ಒಂದು ಸುಭಾಷಿತ ಹೀಗಿದೆ : "ಮಂತ್ರವಲ್ಲದ ಅಕ್ಷರ ಯಾವುದೂ ಇಲ್ಲ ; ಔಷಧವಲ್ಲದ ವನಸ್ಪತಿ ಯಾವುದೂ ಇಲ್ಲ ; ಯೋಗ್ಯತೆಯಿಲ್ಲದ ವ್ಯಕ್ತಿಯೊಬ್ಬನೂ ಇಲ್ಲ ; ಆದರೆ ಅವುಗಳನ್ನು ಸಂರಕ್ಷಣೆ ಮಾಡುವವರು ಮಾತ್ರ ದುರ್ಲಭ."

ಜೀವವೈವಿಧ್ಯದಲ್ಲಿ ಬ್ರೆಜಿಲ್ ಮೊದಲ ಸ್ಥಾನದಲ್ಲಿದ್ದರೆ, ಭಾರತ 2ನೇ ಸ್ಥಾನದಲ್ಲಿದೆ. ವಿಶ್ವದ ಜೀವವೈವಿಧ್ಯದ 18 ಮುಖ್ಯಸ್ಥಳಗಳಲ್ಲಿ ಎರಡು ಭಾರತದಲ್ಲಿವೆ. ಪಶ್ಚಿಮ ಘಟ್ಟಗಳಲ್ಲಿ ಮತ್ತು ಪೂರ್ವ ಹಿಮಾಲಯದಲ್ಲಿ 15,000 ಗಿಡಗಳ ವೈವಿಧ್ಯಮಯ ತಳಿಗಳಿವೆ. ಅವುಗಳಲ್ಲಿ 8000 ಔಷಧೀಯ ಸಸ್ಯಗಳು ಮತ್ತು 2,50,000 ಹೂಗಿಡಗಳ ತಳಿಗಳಿವೆ. ಭಾರತ ಈಗಾಗಲೇ ಸಸ್ಯಗಳ ತಳಿಗಳಲ್ಲಿ ಶೇ. 80 ರಷ್ಟು ಕಳಕೊಂಡಿದೆ. ಭಾರತದ ಹೂಗಿಡಗಳ ತಳಿಗಳಲ್ಲಿ ಶೇ. 11 ಮತ್ತು ದಕ್ಷಿಣ ಭಾರತದ 36 ಔಷಧೀಯ ಸಸ್ಯಗಳು ಅಳಿವಿನ ಅಂಚಿನಲ್ಲಿವೆ.

ಮಾನವ ಮತ್ತು ಪ್ರಕೃತಿಯ ನಡುವಣ ಸತ್ಯಸ್ಯ ಸತ್ಯವಾದ ಸಂಬಂಧವನ್ನು ಉಪನಿಷತ್ ಹೀಗೆ ಹೇಳುತ್ತದೆ: 'ಈ ಪೃಥ್ವಿಯು ಎಲ್ಲಾ ಜೀವಿಗಳಿಗೆ ಜೇನು; ಈ ಪೃಥ್ವಿಗೆ ಎಲ್ಲಾ ಜೀವಿಗಳು ಕೂಡ ಜೇನು'. ಭಾಗವತದಂತೆ, ಒಮ್ಮೆ ಕೃಷ್ಣ ಗೋಕುಲದಲ್ಲಿ ಮಧ್ಯಾಹ್ನ, ಗೋವುಗಳು ನೆರಳಿನಲ್ಲಿ ಮಲಗಿದ್ದಾಗ ಮರದ ಕೆಳಗೆ ಕುಳಿತು ದನಗಾಹಿಗಳಿಗೆ ಹೇಳುತ್ತಾನೆ: 'ಮರಗಿಡಗಳು ಮನುಕುಲಕ್ಕೆ ತುಂಬಾ ಉಪಕಾರಿಗಳು. ಮಾನವನಿಂದ ಏನನ್ನೂ ನಿರೀಕ್ಷಿಸದೆ ಅವನ ಪೋಷಣೆಗೆ ಬಹಳಷ್ಟು ನೀಡುವ ಮರಗಿಡಗಳಿಗೆ ಮಾನವ ಆಭಾರಿಯಾಗಿರಬೇಕು.' ಐದು ವರ್ಷಗಳಿಗೊಮ್ಮೆಯಾದರೂ ಒಂದು ಮರವನ್ನು ನೆಟ್ಟು ಬೆಳಸಬೇಕೆಂದು ಹೇಳಿದ್ದ ಬುದ್ಧ. ಗಾಂಧೀಜಿ ಔರಂಗಾಬಾದ್‌ನಲ್ಲಿದ್ದಾಗ ತನ್ನನ್ನು ನೋಡಲು ಬರುವವರು ಮೊದಲು ಒಂದು ಸಸಿಯನ್ನು ನೆಟ್ಟುಬರಬೇಕೆಂದು ಷರತ್ತು ಹಾಕಿದ್ದರು. ಉತ್ತಮ ಪರಿಸರಕ್ಕಾಗಿ ಭಾರತದ ಹಸಿರುಹೊದಿಕೆ ಶೇ. 33 ಆದರೂ ಇರಬೇಕು; ಆದರೆ ಈಗಿರುವುದು ಬರೀ ಶೇ. 20 ಮಾತ್ರ. ಮಾನವನು ಪ್ರಕೃತಿಯ ನಿಷ್ಠುರ ವಿಧ್ವಂಸಕನಾಗದೆ, ಅದರ ವಿವೇಕೀ ಪೋಷಕನಾಗಬೇಕು; ಪರಿಸರವನ್ನು ಉಳಿಸಿ ತಾನೂ ಉಳಿಯಬೇಕು.

– ಸಾಧಾರ

## ಸಾಲು ಮರ ತಿಮ್ಮಕ್ಕ

ಮಕ್ಕಳೆ, ನಿಮ್ಮನ್ನು ಹೆತ್ತವರು ಎಷ್ಟು ಅಕ್ಕರೆಯಿಂದ ಸಾಕುತ್ತಿದ್ದಾರಲ್ಲವೆ! ಆದರೆ ಇದೇ ರೀತಿ ಗಿಡಗಳನ್ನು ನೆಟ್ಟು ಸಾಕಿದ ತಿಮ್ಮಕ್ಕಜ್ಜಿಯ ಕತೆ ಕೇಳಿರುವಿರಾ? ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲೂಕಿನ ಹುಳಿಕಲ್ ಎಂಬುದು ಪುಟ್ಟ ಹಳ್ಳಿಯ ಬಡ ಕುಟುಂಬದಲ್ಲಿ ತಿಮ್ಮಕ್ಕ ಜನಿಸಿದಳು. ಅವಳಿಗೆ ನಿಮ್ಮಂತೆ ಹಾಡಿ, ಆಡಿ ಕಲಿಯಲು ಆಗಲಿಲ್ಲ. ಅವಳು ತನ್ನ ಹೆತ್ತವರೊಡನೆ ಸಮೀಪದ ಕಲ್ಲುಗಣಿಯಲ್ಲಿ ದುಡಿದು ಜೀವನ ನಿರ್ವಹಣೆಗೆ ನೆರವಾಗುತ್ತಿದಳು. ಅವಳನ್ನು ಚಿಕ್ಕಯ್ಯನೆಂಬವರಿಗೆ ಮದುವೆ ಮಾಡಿ ಕೊಡಲಾಯಿತು. ಹಲವು ವರ್ಷಗಳು ಸಂದರೂ ಮಕ್ಕಳಾಗದ ಕೊರಗು ಆ ದಂಪತಿಗಳಿಗಿತ್ತು. ಆದರೆ ತಿಮ್ಮಕ್ಕ ಅದನ್ನೇ ದೊಡ್ಡ ಸಂಗತಿಯಾಗಿ ಮಾಡದೆ, ಗಿಡಗಳನ್ನು ನೆಡುವ ಕಾಯಕದಲ್ಲಿ ತನ್ನನ್ನು ತೊಡಗಿಸಿಕೊಂಡಳು. ಅವಳ ಮನೆಯ ಸುತ್ತಮುತ್ತ ಧಾರಾಳ ಆಲದ ಮರಗಳಿದ್ದು ತಂಪನ್ನು ನೆರಳನ್ನು ನೀಡುತ್ತಿದ್ದುವು. ಇವುಗಳು ಅವಳಿಗೆ ಆಲದ ಸಸಿಗಳನ್ನು ನೆಟ್ಟು ಬೆಳಸಲು ಪ್ರೇರಣೆ ನೀಡಿದುವು.

ಕಸಿ ಕಟ್ಟುವ ಮೂಲಕ ಆಲದ ಸಸಿಗಳನ್ನು ಮಾಡುವ ರೀತಿಯನ್ನು ಮೊದಲು ಅರಿತುಕೊಂಡಳು. ಗಿಡಗಳು ಬೆಳೆದು ಹೆಮ್ಮರಗಳಾಗಿ ಲೋಕಕ್ಕೆ ಉಪಕಾರಿಗಳಾಗಬೇಕೆಂಬುದು ಅವಳ ಹೆಬ್ಬಯಕೆಯಾಗಿತ್ತು. ಅದಕ್ಕಾಗಿ ತನ್ನ ಊರಿನ ಸಮೀಪದ ಕುದೂರು ಎಂಬ ಹಳ್ಳಿಯಲ್ಲಿ ಹಾದು ಹೋಗುವ ಹೆದ್ದಾರಿಯನ್ನು ಆಯ್ಕೆ ಮಾಡಿದಳು. ಮೊದಲ ವರ್ಷ ನಾಲ್ಕು ಕಿಲೋಮೀಟರ್‌ನಷ್ಟು ರಸ್ತೆಯ ಬದಿಯಲ್ಲಿ ಹತ್ತು ಸಸಿಗಳನ್ನು ನೆಟ್ಟು ನೀರೆರೆದು ಪೋಷಿಸಿದಳು. ಎರಡನೇ ವರ್ಷ 15, ಮೂರನೇ ವರ್ಷ 20, ಹೀಗೆ ಒಟ್ಟು 284 ಆಲದ ಗಿಡಗಳನ್ನು ಹೆದ್ದಾರಿಯ ಇಕ್ಕೆಲಗಳಲ್ಲೂ ನೆಟ್ಟಳು. ಅವಳು ಪ್ರತಿದಿನ ಕೊಡದಲ್ಲಿ ನೀರು ಹೊತ್ತು ನಾಲ್ಕು ಕಿಲೋಮೀಟರಗಳಷ್ಟು ನಡೆದು ಆ ಗಿಡಗಳಿಗೆ ನೀರುಣಿಸುತ್ತಿದ್ದಳು. ಅವುಗಳನ್ನು ಆಡು ದನಗಳು ತಿನ್ನದಂತೆ ತಡೆಯಲು ಮುಳ್ಳು ಬೇಲಿ ನಿರ್ಮಿಸಿದಳು. ಈ ಕೆಲಸಗಳಿಗೆ ಪತಿಯ ಸಹಾಯವೂ ಸಿಗುತ್ತಿತ್ತು. ಇವಳ ಕಾಯಕವನ್ನು ಕಂಡು ಕೆಲವರು "ನಿನಗೆ ಹುಚ್ಚು ಹಿಡಿದಿದೆಯೇ?" ಎಂದೂ ಇನ್ನು ಕೆಲವರು ತಿಮ್ಮಕ್ಕನ ಮಕ್ಕಳು ರಸ್ತೆ ಬದಿಯಲ್ಲಿ ಬೆಳಯುತ್ತಿವೆ ಎಂದೂ ಅಪಹಾಸ್ಯ ಮಾಡುತ್ತಿದ್ದರು. ಆದರೂ ತನ್ನ ಕರ್ತವ್ಯದಿಂದ ಹಿಂದೆ ಸರಿಯದೆ, ಶ್ರಮಪಟ್ಟು ಆಲದ ಮರಗಳನ್ನು ತನ್ನ ಮಕ್ಕಳೇ ಎಂದು ಪೋಷಿಸಿದಳು. ಆ ಮರಗಳು ಇಂದು ದಾರಿ ಹೋಕರಿಗೆ ನೆರಳನ್ನು ಕೊಡುತ್ತಿದ್ದರೆ, ಪ್ರವಾಸಿಗರ ಕಣ್ಮನಗಳನ್ನು ಆಕರ್ಷಿಸುತ್ತಿವೆ. ಈ ಕಾರ್ಯದಿಂದ ಆಕೆ ಎಲ್ಲರಿಗೂ 'ಸಾಲು ಮರ ತಿಮ್ಮಕ್ಕ' ಎಂದೇ ಪರಿಚಿತಳಾದಳು. ಮಾತ್ರವಲ್ಲ, ರಾಷ್ಟ್ರೀಯ ಪೌರ ಪ್ರಶಸ್ತಿ, ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ, ಕರ್ನಾಟಕ ಕಲ್ಪವಲ್ಲಿ, ವನಮಾತೆ, ಮಹಿಳಾ ರತ್ನ ಮೊದಲಾದ ರಾಜ್ಯ – ರಾಷ್ಟ್ರ ಪ್ರಶಸ್ತಿಗಳು ಅವಳಿಗೆ ಲಭಿಸಿವೆ. ಗಿಡಗಳನ್ನು ಸ್ವಂತ ಮಕ್ಕಳಂತೆ ಪೋಷಿಸಿದ ಆ ಅಜ್ಜಿ ನಮಗೆಲ್ಲ ಮಾದರಿಯಲ್ಲವೇ?

**ಮೌಲ್ಯನಿರ್ಣಯ ಚಟುವಟಿಕೆಗಳು**

**ಚಟುವಟಿಕೆ 1**

### ಪಯಸ್ವಿನಿ

ಹರಿದು ಬರುವಳಿದೊ ನಮ್ಮಯ ನಾಡಿಗೆ
ತಾಯಿ ಪಯಸ್ವಿನಿ ಪುಣ್ಯನದಿ
ನೀರಿನ ಬಡತನ ನೀಗುತ ಜನರಿಗೆ
ಭಾಗ್ಯವನೀಯುವ ಭಾಗ್ಯನಿಧಿ
ಗಟ್ಟದ ಮಣ್ಣಿನ ಮೆಟ್ಟಲನಿಳಿಯುತ
ಬೆಟ್ಟದ ಬುಡಗಳ ತೋಯಿಸುತ
ನೆಟ್ಟನೆ ಕಾಡೊಳು ನುಸುಳುತ, ನಾಡನು
ಸುತ್ತಲು ಬಳಸುತ, ಬಳುಕುತ್ತ
ಕಲಕಲನಾದವ ಬೀರುತ, ಮೋದವ
ತಾಳುತ ತಾಳಕೆ ಸರಿಯಾಗಿ
ನಾಟ್ಯದ ಹೆಜ್ಜೆಯನಿಕ್ಕುತ, ನಲಿಯುತ
ನಲಿಯುತ ಬರುವಳು ಸೊಗಸಾಗಿ

ಮೇಲಿನ ಪದ್ಯಭಾಗವನ್ನು ಓದಿದಿರಲ್ಲವೇ? ನದಿಯು ಹರಿಯುವ ಸೊಬಗನ್ನು ಈ ಪದ್ಯದಲ್ಲಿ ಬಹಳ ಸುಂದರವಾಗಿ ವರ್ಣಿಸಲಾಗಿದೆ. ಆ ಸೊಬಗನ್ನು ನಿಮ್ಮ ಮಾತುಗಳಲ್ಲಿ ವರ್ಣಿಸಿರಿ.

**ಚಟುವಟಿಕೆ 2**

## ಈ ನೆಲ – ಈ ಜಲ

ಈ ನೆಲ ಈ ಜಲ ಈ ಕಾಡು
ಗೀಜಗ ಕಟ್ಟಿದ ಈ ಗೂಡು
ಇರಲಿ ಇರಲಿ ಹೀಗೆ ಪ್ರಕೃತಿ ಕೊಟ್ಟ ಕೊಡುಗೆ
ಜುಳು ಜುಳು ಹರಿವಾ ಹೊಳೆಗೇ
ಕೊಳೆಯಾ ಬೆರೆಸೊ ಖಳರೇ
ಬಗೆ ಬಗೆ ಹೊಗೆಯನು ಉಗುಳಿ
ಮಲಿನಗೊಳಿಸದಿರಿ ಗಾಳಿ
ಸಾಕು ಇನ್ನು ಸಾಕು ಈ ತಪ್ಪ ತಿದ್ದಬೇಕು.
ಮರಗಳ ಕಡಿದು ಕಡಿದು
ಎಲ್ಲೆಡೆ ಭಣ ಭಣ ಬಿಸಿಲು
ಚಿಲಿಪಿಲಿ ಉಲಿವ ಹಕ್ಕೀ
ಅಳುತಿದೆ ಬಿಕ್ಕಿ ಬಿಕ್ಕಿ
ಸಾಕು ಇನ್ನು ಸಾಕು ಹಸಿರಾಗಬೇಕು ಬದುಕು
ರಕ್ಷಿಸಬೇಕು ಬಿಡದೇ
ನಮ್ಮ ನೆಲಜಲಗಳ ನಾವು
ನಾಳಿನ ಪೀಳಿಗೆಗಾಗಿ
ಉಳಿಸಿರಿ ನಾಡಿನ ಚೆಲವು
ಸಿರಿನಾಡ ಚೆಲುವು ಈ ಕರುನಾಡ ಚೆಲುವು

**– ಎಚ್. ದುಂಡಿರಾಜ್**

ಮೇಲಿನ ಕವನವನ್ನು ಓದಿದಿರಲ್ಲವೇ?

1. ಕವಿಯು ಪರಿಸರ ಮಾಲಿನ್ಯದ ಬಗ್ಗೆ ಏನೆಂದು ಹೇಳಿದ್ದಾರೆ?
2. ಕಾಡುಗಳನ್ನು ಕಡಿಯುವುದರಿಂದ ಏನೆಲ್ಲ ಸಮಸ್ಯೆಗಳುಂಟಾಗುತ್ತವೆ?
3. ನೆಲ ಜಲವನ್ನು ರಕ್ಷಿಸುವುದರ ಪ್ರಾಧಾನ್ಯದ ಬಗ್ಗೆ ಕವಿ ಏನೆಂದು ಹೇಳಿದ್ದಾರೆ?

ಮೇಲಿನ ಕವನದ ಆಸ್ವಾದನ ಟಿಪ್ಪಣಿಯನ್ನು ಬರೆಯಿರಿ.

**ಚಟುವಟಿಕೆ 3**

ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯು ಹೊಸಪೇಟೆ ನಗರದ ಮಧ್ಯಭಾಗದಲ್ಲಿದೆ. ಶಾಲೆಯ ಸುತ್ತುಮುತ್ತಲು ಪೇಟೆಯ ತ್ಯಾಜ್ಯ ವಸ್ತುಗಳನ್ನು ಹಾಕುತ್ತಿದ್ದಾರೆ. ಇದರಿಂದ ಶಾಲೆಯ ಮಕ್ಕಳು ಬಹಳಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ತ್ಯಾಜ್ಯ ವಸ್ತುಗಳ ವಿಲೇವಾರಿಯನ್ನು ಸೂಕ್ತ ರೀತಿಯಲ್ಲಿ ಮಾಡುವಂತೆ ನಗರ ಪಂಚಾಯತು ಅಧ್ಯಕ್ಷರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

**ಚಟುವಟಿಕೆ 4**

ಎಲ್ಲಾ ಪೇಟೆ ಪಟ್ಟಣಗಳಲ್ಲೂ ಪರಿಸರ ಮಾಲಿನ್ಯವು ಒಂದು ಜ್ವಲಂತ ಸಮಸ್ಯೆಯಾಗಿದೆ. ಇದರಿಂದ ಜನರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಸಮಸ್ಯೆಗೆ ಕಾರಣ, ಪರಿಣಾಮಗಳು ಮತ್ತು ಪರಿಹಾರೋಪಾಯಗಳನ್ನು ಸೂಚಿಸುವ ಒಂದು ಪ್ರಬಂಧವನ್ನು ತಯಾರಿಸಿರಿ.

**ಚಟುವಟಿಕೆ 5**

ಈಗ ಎಲ್ಲೆಡೆಯಲ್ಲಿಯೂ ಜಲಕ್ಷಾಮವು ಕಂಡುಬರುತ್ತಿದೆ. ಕೆಲವೆಡೆಗಳಲ್ಲಿ ನೀರಿನ ಮಹತ್ವವನ್ನರಿಯದೆ ಜನರು ನೀರನ್ನು ಪೋಲು ಮಾಡುತ್ತಿದ್ದಾರೆ. ಜಲವು ಅಮೂಲ್ಯವಾದುದು. ಆದುದರಿಂದ ಜಲಸಂರಕ್ಷಣೆಯ ಮಹತ್ವವನ್ನು ಜನರಿಗೆ ಮನದಟ್ಟು ಮಾಡುವುದಕ್ಕಾಗಿ ಒಂದು ಭಿತ್ತಿಪತ್ರವನ್ನು ತಯಾರಿಸಿರಿ.

* * *